STATEMENT—*concld.*

Sl. No.	*Village*	*Name of the parties*	*Compensation paid.*		
		Sriyuths—	Rs.	a.	p.
101	Kasaba, Honnahalli ...	Siddegowda ...	517	8	0
102	Banawara, Puralehalli ...	Lokyanaika ...	51	12	0
103		Hemla Naika ...	115	0	0
		Periya Naika ...			
104	Kanakatte, Paduvanahalli ...	Venkata Boyi ...	575	0	0
105	Doddametikurke ...	Shivanna ...	71	14	0
106		Haralegowda ...	86	4	0
107		Mailari ...	158	2	0
108		Doddanaganna ...	14	6	0
109		Ramalingegowda ...	891	4	0
110	Javagal, Udiganalu ...	Madegowda ...	460	0	0
111	Belavalli ...	Bheemla Naika ...	5	0	0
112		Giriyappa ...	5	0	0
113		Tholacha Naika ...	5	0	0
114		Bheemla Naika ...	1	4	0
115	Kasaba, Gollarahalli ...	Sm. Laxamma ...	1,328	0	0
116	Arsikere ...	Kuluvadi Inam ...	2,426	8	0
117	Javagal, Karagunda ...	Mallasetty ...	1,303	0	0
118	Kasaba, Thirupathihalli ...	Dasappa ...	785	14	0
119	Gandsi, Dasenahalli ...	Bramhadevaru ...	450	10	0
		Total ...	44,257	1	0

BUDGET FOR 1955-56—GENERAL DISCUSSION—continued.

Mr. SPEAKER.—We will now take up budget discussion. Not more than ten minutes will be allowed for each member. Sri M. Linganna.

Sri M. PALANIYAPPAN (Ulsoor).—Sir, yesterday, the Chair said that the ruling will be given today. . . .

Mr. SPEAKER.—I forgot to tell you. The ruling will be given tomorrow.

Sri M. LINGANNA (Nanjangud).—Sir, the Finance Minister has presented a Budget which is deficit to the tune of four crores and odd. Several speakers have spoken giving various reasons which have contributed to a Budget of this kind. In the Budget speech itself, the Finance Minister has referred to the inevitability of the Budget being deficit to the tune of four crores and odd. He has stated specifically that we are in the last year of the First Five-Year Plan and that we are on the threshold of launching the Second Five-Year Plan. He has further eloquently stated that when a State is launching plans after plans it would consume enormous funds of the State and that it would naturally result in a deficit budget. He also stated in his speech that for the nation-building activities large sums of moneys have been spent. The main reason advanced is that the First Five-Year Plan is coming to a close and the Second Five-Year Plan is about to begin. This may well seem for the first time a proper justification. On the other hand, when we look into the working of other departments and see this deficit Budget from the point of view of expenditure and also revenue, it seems as though the budgetary position is not so safe as one can laudably applaud.

3 P.M.

Because in the very budgetary position of this year we are seeing that there is a deficit and also that deficit

(SRI M. LINGANNA.)

could not be progressively wiped out. We thought, when the Finance Minister presented the Budget last year or year before last, that he would cope up with the situation and that he would present us with a surplus one the next year. But some of the Members of this august House seem to think that when our nation-building activities are expanding and when the State is launching on national schemes based on two Five-Year Plans, the deficit budget is a welcome sign. As I have said and as is being explained with facts and figures by one of my friends who is hailing from T. Narsipur, the budgetary position is not so sound; so, Sir, he, the Finance Minister has further committed the State on this very score of the budget being a deficit one that he would tax the commercial crops to make up the deficit to the tune of Rs. 20 lakhs. Sir, last year itself, the question of the taxable capacity of the people of the State was discussed at length and a Bill was also presented to this House wherein the Government sought to impose a surcharge on different items of land revenue but that could not be introduced. Probably the reasons are not too well known to us as to why that particular taxation measure could not be brought forth and could not be passed in this very august House. But this year, the same taxation is being introduced in a different form altogether, wherein it has been cleverly stated that tax is levied only on commercial crops on a sliding basis. One will have to look at this particular problem of taxing the agriculturist who produces or resorts to produce commercial crops like groundnut, arecanut, tobacco, cotton, potatoes, etc. This particular measure or the intention of the Government is to be viewed from the point of view of the price-level of all these commercial products. Let me instance a commercial product, like groundnut. The price level of groundnut product has come down this year so much that even the biggest landlord was not able to make any profit whatsoever. I have seen several instances of agriculturist families who were obliged to plough back the very commercial products they had grown in the fields. That is the position of the price level of the groundnut and also of the other commercial crops. In view of the price level that is obtaining today in the State as well as outside, I think the taxable capacity of this particular agricultural class is also limited. After all, what is the amount that we are going to get into the coffers of the State? It is a paltry sum of Rs. 20 lakhs. What is the total deficit that we are now facing? It is to the tune of nearly Rs. 4 crores. Sir, it is from this point of view that the Government will have to think twice before they try to introduce any financial Bill in which they seek to impose a tax on the agriculturists who produce commercial crops. With regard to coffee plantations and other things, the Hon'ble Member hailing from Jagalur has in a most picturesque manner depicted to us what would happen with regard to the consumers and others affected by this taxation. So, Sir, when a measure of this kind is intended to be launched by the State Government, I most earnestly impress on them that this problem will have to be once again thought over and thought very well over the taxable capacity of this particular agriculturist class and then if it becomes absolutely essential and if they in their opinion think that Rs. 20 lakhs would gap the deficit between the revenue and the expenditure of the State, then alone they will have to launch upon such a scheme of taxation. Further, what the kind of taxation we are now seeking to introduce? It is a direct tax. It is the amount that we are going to take out directly from the hands of the agriculturist. The person who grows cotton, the person who grows groundnut, the person who grows tobacco is asked to part with the money that he is going to get out of the particular agricultural produce and that is a direct taxation. If it were an indirect taxation, probably then the agricultural class or the class upon which the incidence of tax is imposed would not feel it. One should also think from

the point of view of the quantum of population that would come under the operation of this particular taxation measure. So, Sir, I most earnestly beseech the Government to think over the taxation that they intend to impose on the agricultural classes.

Sir, the other thing I wish to refer to is the cultural activities of the State that they have launched and I must here most vehemently object that the name of one of the great saints Swami Vivekananda has been brought forth into the Budget speech to defend their cultural activities. I must in a most indignant manner request the Government to put an end to this cultural activity. There it has been said that the blood of the population should be cured and cured by their cultural activities. I am afraid that the blood cannot be cured by asking a person to read Ramayana or a poem or two in Ramayana or Chapter or two in Mahabaratha or quote the 12th Chapter in Bagavath Geetha. (*Interruption*). I am not afraid of anybody. I am afraid of one who is of the truth and lives for the truth and by the truth. I am resenting at the very conception of purification of blood and the saying that the whole population of the State of Mysore is impure in blood. Could one particular cultural speech made by an eminent scholar either in Kannada or in Sanskrit purify the blood of the people of the State? I am afraid that this conception of the State Government with regard to the cultural level or with regard to the mental make-up of the people of the State is rather very revolting. Any Mysorean to think that his culture is low in level,—I do not want to use a harsh word—is a thing which none of us would countenance. What is the cultural activity that we could find before they launched upon it?

Mr. SPEAKER.—The Hon'ble Member has exceeded the time-limit. He can reserve those remarks for other occasions.

Sri M. LINGANNA.—I advise the Government to utilise these Rs. 5 lakhs to print literature and other puranas at cheaper price which would appeal to the people at large. That will be a welcome measure but not a measure of this kind, wherein they seek to impose or inject the so-called culture that they have tried to manufacture in the laboratory of their own conception.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸಭಾಪತಿಗಳೇ, ನಮ್ಮ ಎದುರು ಪಕ್ಷದ ನಾಯಕರು ಮಾಮೂಲನಂತೆ . . . .

ಒಬ್ಬ ಸದಸ್ಯರು.—ನೀವು ಮಾಮೂಲನಂತೆ ಹೇಳುತ್ತಿದ್ದೀರಿ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅವರು ಈ ವರ್ಷದ budgetನ್ನು depressing, thoughtless, desparate, disastrous ಮತ್ತು ನಮ್ಮ ಭವಿಷ್ಯ ಬಹಳ ಕತ್ತಲಿನಿಂದ ಕೂಡಿದೆ ಎಂದು ಹೇಳಿದರು. ಏತಕ್ಕೆ ಎದುರು ಪಕ್ಷದ ನಾಯಕರು ನಮ್ಮ ಮುಂದಿನ ಭವಿಷ್ಯ ಬಹಳ ಕತ್ತಲಿನಿಂದ ಕೂಡಿದೆ ಎಂಬ ನಿರಾಶಾ ಭಾವನೆಯನ್ನು ಹೊಂದಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಈ ಬಡ್ಜೆಟ್ಟನ್ನು ನಾನು ನೋಡುವ ರೀತಿಯಲ್ಲಿ ಬಹಳ ಸಮರ್ಪಕವಾಗಿದೆ ಮತ್ತು ಸಮಯೋಚಿತವಾಗಿದೆ ಎಂದು ಹೇಳುತ್ತೇನೆ. ಈಗಿನ ಸನ್ನಿವೇಶದಲ್ಲಿ ನಮ್ಮ ದೇಶದಲ್ಲಿರತಕ್ಕಂಥ ಪರಿಸ್ಥಿತಿಯನ್ನು ನಾವು ಗಮನದಲ್ಲಿಟ್ಟುಕೊಂಡರೆ ಈಗಿನ ಸನ್ನಿವೇಶಕ್ಕೆ ಏರ್ಪಾಡುಮಾಡಿರತಕ್ಕಂಥ Budget ಇದು ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಈ Budgetನಲ್ಲಿ ಸಾಮಾನ್ಯ ಜನರಿಗೆ ಅನುಕೂಲವಾಗುವುದಕ್ಕೆ ಹಣವನ್ನು ಒದಗಿಸಿದ್ದಾರೆಯೋ, ಅಭಿವೃದ್ಧಿ ಇಲಾಖೆಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಿದ್ದಾರೆಯೋ ಎಂಬುದನ್ನು ನಾವು ನೋಡಿದರೆ ವರ್ಷ ವರ್ಷಕ್ಕಿಂತಲೂ ಈ ವರುಷ Nation building activities ಏನು ಇವೆಯೋ ಅಭಿವೃದ್ಧಿ ಇಲಾಖೆಗಳು ಏನು ಇವೆಯೋ ಅವುಗಳಿಗೆ ಹೆಚ್ಚಿಗೆ ಹಣವನ್ನು ಈ ವರ್ಷದ Budgetನಲ್ಲಿ ಒದಗಿಸಿದ್ದಾರೆ. ಅಂಕಿಅಂಶಗಳು ಇಲ್ಲಿ ಪ್ರತಿಯೊಬ್ಬರಿಗೂ ಗೊತ್ತಿದೆ. ಅದನ್ನು 10 ನಿಮಿಷಗಳಲ್ಲಿ ಓದುವುದಕ್ಕೆ ಸಾಧ್ಯವಿಲ್ಲ. ಆದರೂ ಕೆಲವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಭಿವೃದ್ಧಿ ಇಲಾಖೆಗಳಿಗೆ 51-52 ರಲ್ಲಿ 320 ಲಕ್ಷ; 52-53ರಲ್ಲಿ 447 ಲಕ್ಷ ಮತ್ತು 53-54ರಲ್ಲಿ 757 ಲಕ್ಷ ಮತ್ತು ಈ ಸಾಲಿನಲ್ಲಿ 1251-52 ಲಕ್ಷ ಒದಗಿಸಿದ್ದಾರೆ. ಅಂದಮೇಲೆ ಈ ಅಭಿವೃದ್ಧಿ ಇಲಾಖೆಗಳು ಎಷ್ಟರ ಮಟ್ಟಿಗೆ ವಿಸ್ತಾರವಾಗಿ ಹೋಗುತ್ತಿವೆ, ಇವಕ್ಕೆ ಸರ್ಕಾರದವರು ಸಾಕಾದಷ್ಟು ಹಣವನ್ನು ಒದಗಿಸಬೇಕೇ, ಬೇಡವೇ ಎನ್ನುವುದನ್ನು ನಮ್ಮ ಸ್ನೇಹಿತರು ಅರಿತುಕೊಳ್ಳಬೇಕಾಗಿದೆ. ನಾವು ನೋಡುತ್ತಾ ಇರುವಹಾಗೆ ಸ್ವಾತಂತ್ರ್ಯ ಬಂದಮೇಲೆ ಜನಗಳ ಆಶೋತ್ತರಗಳು ವಿಪರೀತವಾಗಿ ಜಾಸ್ತಿಯಾಗುತ್ತಾ ಇವೆ. ನಾನು ವಿದ್ಯಾರ್ಥಿಯಾಗಿದ್ದಾಗ, ಶ್ರೀಮಾರ್ಜ ಇಮಾಂ ಸಾಹೇಬರು ಮಂತ್ರಿಗಳಾಗಿದ್ದರು. Assembly ನಡೆಯುತ್ತಿರುವಾಗ ಅದರ ಕಾರ್ಯಕಲಾಪಗಳನ್ನು ನೋಡುತ್ತಿದ್ದೆ. ಜನಗಳ ಬೇಡಿಕೆಗಳು ಸಮಾಜದಲ್ಲಿ ಕೆಲವು ವ್ಯಕ್ತಿಗಳು, ಸ್ವಲ್ಪ ಮುಂದುವರಿದಿರತಕ್ಕಂಥವರು, ಜಮೀನ್ದಾರರಾಗಿರತಕ್ಕಂಥವರು, ಪಟ್ಟಣಗಳಲ್ಲಿ, ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಮತ್ತು ಹೋಬಳಿ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ವಾಸಮಾಡುವವರು ಕೆಲವರು ಆ ಕೆಲಸ ಈ ಕೆಲಸ ಬೇಕೆಂದು ಕೇಳುತ್ತಿದ್ದರು. ಇಚೀಚಿಗೆ 6-7 ವರ್ಷಗಳಿಂದ ನಾವುಗಳು ಗ್ರಾಮಾಂತರ ಪ್ರದೇಶಗಳಲ್ಲಿ

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಹೋಗಿ ನೋಡಿದರೆ ಯಾವ ಗ್ರಾಮದಲ್ಲೂ ಕೂಡ ಪ್ರಜೆಯು ತನ್ನ ಹಕ್ಕುಬಾಧ್ಯತೆಗಳು ಏನು ಎಂಬುದನ್ನು ಅರಿತುಕೊಂಡು ತನ್ನ ಸೌಕರ್ಯಗಳು ಏನು, ಅವುಗಳನ್ನು ನೆರವೇರಿಸಿಕೊಳ್ಳುವುದಕ್ಕೆ ಸರ್ಕಾರದವರು ಏನು ಸಹಾಯ ಮಾಡಬಲ್ಲರು ಎಂಬುದನ್ನು ಅರಿತುಕೊಂಡು, ಸರ್ಕಾರದವರಿಂದ ಆಗಬೇಕಾದ ಸಹಾಯಗಳನ್ನು ನಿರೀಕ್ಷಿಸುತ್ತಿದ್ದಾನೆ. ಇದನ್ನೂ ಕೂಡ ಮಾನ್ಯ ಮಂತ್ರಿಗಳು tour ಹೋದಾಗ Assembly Members Constituencyಗೆ ಹೋದಾಗ ಪ್ರತಿಯೊಂದು ಗ್ರಾಮದಲ್ಲೂ ಗ್ರಾಮಸ್ಥರು ಈಚೀಚೆಗೆ ನಮ್ಮ ಊರಿಗೆ ಸ್ಕೂಲು ಬೇಕು, ಸ್ಕೂಲು ಕಟ್ಟಡ ನಾವೇ ಕಟ್ಟಿಸಿಕೊಡುತ್ತೇವೆ, ರಸ್ತೆ, ಮಣ್ಣು ಕೆಲಸ ಮಾಡುತ್ತೇವೆ, Dynamite ಕೆಲಸಮಾಡಿಕೊಡುತ್ತೀರಾ, ಗ್ರಾಮಾಂತರ ಪ್ರದೇಶಗಳಿಗೆ ಬೇಕಾದಂಥ ದಿನಚರಿಯ ಕೆಲಸಗಳಲ್ಲಿ ತಮ್ಮ ಕೈಯ್ಯಲ್ಲಿ ಆಗತಕ್ಕಂಥ ಕೆಲಸಗಳನ್ನು ಮಾಡಿಕೊಡುತ್ತೇವೆ, ಸರ್ಕಾರ ಕೊಡಬೇಕಾದಂಥ ಹಣವನ್ನು ನೀವು ಕೊಡಿ ಎಂದು ಕೇಳುತ್ತಿದ್ದಾರೆ. ಯಾವ ಸರ್ಕಾರವೇ ಆಗಲಿ ಯಾವ ಪ್ರಜಾಪ್ರಭುತ್ವದ ಸರ್ಕಾರವಾದರೂ ಕೂಡ ಜನಗಳ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಹಿಂಜರಿದರೆ ಅದು ದೊಡ್ಡತನದ, ಧೈರ್ಯ ಮತ್ತು ವಿವೇಕದಿಂದ ಕೂಡಿದ ಸರ್ಕಾರ ಎನ್ನಿಸಿಕೊಳ್ಳಲಾರದು. ಈಗ ಜನಗಳಲ್ಲಿ ತಾವು ಅಭಿವೃದ್ಧಿ ಹೊಂದಬೇಕು, ತಾವು ಮುಂದುವರಿಯಬೇಕು, ಆ ಮೂಲಕ ದೇಶ ಮುಂದುವರಿಯಬೇಕು ಎಂಬ tempo—ಮನೋಭಾವ—ಉಂಟಾಗಿದೆ. ಆ tempoವನ್ನು ಇಳಿಸದೆ ಸರ್ಕಾರದವರು ಏನೇನು ಹಣಕಾಸಿನ ಅನುಕೂಲಗಳನ್ನು ಮಾಡಿಕೊಡಬೇಕೋ ಅದನ್ನು ಮಾಡಿಕೊಡುವುದು ಅವರ ಕರ್ತವ್ಯ. ಇದೇ ಪ್ರಕಾರ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ಕಾರ್ಯಗಳಿಗೆ ಏನೇನು ಹಣವನ್ನು ಒದಗಿಸಬೇಕೋ ಅದನ್ನು ಒದಗಿಸಿದ್ದಾರೆ. ಅನೇಕ ನೀರಾವರಿ ಯೋಜನೆಗಳನ್ನು ಮಾಡಿದ್ದಾರೆ. ಇಷ್ಟೆಲ್ಲಾ ಆದಮೇಲೆ ಈ ಬಡ್ಜೆಟ್ಟನ್ನು ಸರ್ವಾಂಗ ಸುಂದರ ಮಯವಾಗಿದೆಯೆನ್ನಬಹುದು—ಯಾವಾಗ ಎಂದರೆ, ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಸ್ಕೂಲನ್ನು ಕೊಟ್ಟು, ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟು, ಮಾರ್ಗಾನುಕೂಲತೆಗಳನ್ನು ಕಲ್ಪಿಸಿಕೊಟ್ಟು ಸಹಾಯ ಮಾಡಿದಾಗ. ಎಲ್ಲಾ ಕಡೆಗಳಲ್ಲೂ ಆಸ್ಪತ್ರೆಗಳ ಸೌಕರ್ಯವನ್ನು ಕೊಟ್ಟೇ ತೀರಬೇಕು, ಇವೆಲ್ಲಕ್ಕೂ ಹಿಂದಿನ ವರ್ಷಕ್ಕಿಂತಲೂ ಹೆಚ್ಚಿಗೆ ಹಣವನ್ನು ಒದಗಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ, ಈ ನಾಲ್ಕು ವಿಷಯಗಳ ಸಾಧನೆಗಾಗಿ ಇನ್ನೂ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿ ಸಹಾಯ ಮಾಡುವುದಾಗಿದ್ದರೆ, ಈ ಬಡ್ಜೆಟ್ಟನ್ನು ಖಂಡಿತವಾಗಿಯೂ ಸರ್ವಾಂಗ ಸುಂದರವಾಗಿದೆಯೆನ್ನುತ್ತಿದ್ದೆ. ಮುಂದಿನ ವರ್ಷವಾದರೂ ಅದನ್ನು ಆಗಮಾಡಿ ಸರ್ವಾಂಗ ಸುಂದರವಾಗಿ ಮಾಡಬೇಕೆಂದು ನಾನು ಹೇಳುತ್ತೇನೆ.

ಇದನ್ನು ಸಾಧಿಸಬೇಕಾದರೆ ಮೂರು ವಿಧಾನಗಳಿವೆ. ಒಂದು ಸುಂಕ ಹಾಕಬೇಕು. ಅದಿಲ್ಲದಿದ್ದರೆ, economy measures ತರಬೇಕು. ಅದು ಬಿಟ್ಟರೆ ಮೂರನೆಯದು ಸಾಲ ಎತ್ತಬೇಕು. ಈ ವರ್ಷ, ತೆರಿಗೆ ಸಾಮಾನ್ಯ ಜನರ ಮೇಲೆ ಬೀಳದಿರುವ ರೀತಿಯಲ್ಲಿ ಬಡ್ಜೆಟ್ ತಯಾರಿಸಿದ್ದೀರಿ. ಹೀಗೆ ಮಾಡಿರುವುದಕ್ಕೆ ಸರ್ಕಾರದವರನ್ನು ನಾನು ವಂದಿಸಬೇಕಾಗಿದೆ. ಎದುರು ಪಕ್ಷದವರು ಮಾತನಾಡಿದಾಗ ಹಾಗಲ್ಲ, ಹೀಗಲ್ಲ, ಸಿಂಕಿಂಗ್ ಫಂಡ್ ಮಾಡಲಿಲ್ಲ, ಸಾಲದ ಹಣವನ್ನೇ ಉಪಯೋಗಿಸುತ್ತಿದ್ದಾರೆ ಎಂಬುದನ್ನು ಹೇಳುತ್ತಿದ್ದರೇ ವಿನಾ, ಬಡ್ಜೆಟ್ಟನ್ನು ಯಾವ ರೀತಿ ತಯಾರು ಮಾಡಬೇಕು, ಯಾವರೀತಿ ಉಳಿತಾಯ ಮಾಡಬೇಕು, ಉತ್ಪತ್ತಿಯನ್ನು ಹೇಗೆ ಜಾಸ್ತಿ ಮಾಡಬೇಕು—ಎಂಬ practical ಮತ್ತು constructive ಸಲಹೆ ಕೊಟ್ಟವರು ವಿರಳ. ಏಕೆಂದರೆ, economy measures ವಿಚಾರದಲ್ಲಿ ಯಾವ ಯಾವ ಆಫೀಸುಗಳಲ್ಲಿ ಯಾವ ಯಾವ ಬಾಬುಗಳಲ್ಲಿ ಅಧಿಕಾರಿಗಳನ್ನು ತೆಗೆದುಹಾಕಬೇಕೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕಾರಣ, ಪ್ರತಿಯೊಂದು ಇಲಾಖೆಯಲ್ಲೂ ಕೆಲಸ ಜಾಸ್ತಿಯಾಗುತ್ತಿದೆ. ಯಾವ ಅಧಿಕಾರಿಯನ್ನು ಕೇಳಲಿ, 'I am over-worked' ಎಂದು ದೂರನ್ನು ಹೇಳುತ್ತಾರೆ. ಹೀಗಿರುವಾಗ economy ಮಾಡುವುದು ಬಹಳ ಕಷ್ಟ.

ಇನ್ನು ಅಧಿಕಾರಿಗಳ ಸಂಬಳ ಸಾರಿಗೆಗಳ ವಿಚಾರದಲ್ಲಿ, ಎಲ್ಲರೂ N.G.O.ಗಳ ವಿಚಾರದಲ್ಲಿ ಮಾತನಾಡಿದ್ದಾರೆ. ಈ ವಿಷಯದಲ್ಲಿ ಶ್ರೀ ಮುಲ್ಕ ಗೋವಿಂದ ರೆಡ್ಡಿಯವರೂ ನಾವೂ common views ಇಟ್ಟುಕೊಂಡಿದ್ದೇವೆ. ಆದರೆ ಇವರುಗಳು N.G.O.ಗಳನ್ನೂ ಕೂಲಿಗಾರರನ್ನೂ ಹುಡುಕಿಕೊಂಡು ಹೋಗುವುದು cheep popularityಗಾಗಿ ಎನ್ನಬೇಕು. ಆದರೆ, ವಾಸ್ತವವಾಗಿ ಅವರ constituencyಯಲ್ಲಿರುವ ಸಾಮಾನ್ಯ ಜನರ ಸ್ಥಿತಿಗತಿಗಳೇನು, ಅವರ per capita income ಎಷ್ಟು, ಯಾರು ದೇಶದ ಬೊಕ್ಕಸವನ್ನು ತುಂಬುತ್ತಿದ್ದಾರೋ ಅವರ paying capacity ಏನಿದೆ, ಅವರನ್ನೂ, factory workersನ್ನೂ ಹೋಲಿಕೆ ಮಾಡಿದ್ದರೆ, ಅವರಿಗಿಂತಲೂ ಇವರ ಕಾರ್ಖಾನೆ ಕೆಲಸಗಾರರ ಮತ್ತು ಸರ್ಕಾರಿ ನೌಕರರ ಸ್ಥಿತಿಗತಿಗಳು ಉತ್ತಮವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ, ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈಗ ಈ ಆಯವ್ಯಯ ಪಟ್ಟಿಯ ಮೇಲೆ ಮಾತನಾಡುವುದೆಂದರೆ, ರಾಮಾಯಣವನ್ನು ಮೂರು ಮಾತಿನಲ್ಲಿ ಮುಗಿಸಿದ ಹಾಗೆ ಆಗುತ್ತದೆಂದು ಹೇಳಬೇಕಾಗಿದೆ. ಏಕೆಂದರೆ, ಹೆಚ್ಚಿಗೆ ಹೇಳಲು ಕಾಲ ಅವಕಾಶವಿಲ್ಲ. ಆದ್ದರಿಂದ ನಾನೂ ಮೂರು ಮಾತಿನಲ್ಲಿ ಹೇಳಿ ಮುಗಿಸುತ್ತೇನೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ್ಗೆ ಮೊದಲು ಏನೇನು ಮಾಡಬೇಕೆಂದು ಯೋಚನೆ ಮಾಡಿಕೊಂಡಿದ್ದರೋ, ಆ ಯೋಚನೆಗಳನ್ನು ಕೈಗೂಡಿಸುವುದಕ್ಕೆ ಆಗದೆ, ಅವರು ಮಾಡಿದ ಕೆಲಸ ಕಾರ್ಯಗಳಲ್ಲಿ ಅಭಿವೃದ್ಧಿಯನ್ನು ಕಾಣದೆ, ಈಗ ಸೋಷಿಯಲಿಸ್ಟ್ ಪ್ಯಾಟರ್ನ್ ಎಂದು ಒಂದು ಹೊಸ ದಾರಿಯನ್ನು ಹುಡುಕಿದ್ದಾರೆ. ಅದರಲ್ಲೂ ಸೋಷಿಯಲಿಸಂ ಎಂದರೆ ಸಮತಾವಾದ ಅದರ ಪ್ಯಾಟರ್ನ್ ಮಾಡುತ್ತೇವೆಂದು ಹೊರಟಿದ್ದಾರೆ.

ಇನ್ನು ಈ ಬಡ್ಜೆಟ್ಟನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹರಿಜನ ಸದಸ್ಯರುಗಳು ಅಸೆಂಬ್ಲಿಯಲ್ಲಿ ಯಾವಾಗ ನೋಡಿದರೂ ಹರಿಜನರ ಸಮಸ್ಯೆಯನ್ನೇ ಮಾತನಾಡುತ್ತಿರುತ್ತಾರೆ, ಇವರಿಗೆ ದೇಶದ ಹಿತದೃಷ್ಟಿಯಿದೆಯೋ ಇಲ್ಲವೋ, ಸವರ್ಣರಲ್ಲದಿರುವವರ ವಿಷಯದಲ್ಲಿ ಸಹಾನುಭೂತಿಯಿದೆಯೋ ಇಲ್ಲವೋ ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಮುಂದಿನ ಸಾಲಿನಲ್ಲಾದರೂ ಈ ತೆರದಲ್ಲಿ ಅವರ ಸಮಸ್ಯೆಗಳು ಸಭೆಯ ಮುಂದೆ ಬರದಿರುವ ರೀತಿಯಲ್ಲಿ, ಮುಂದಿನ ಸಾಲಿನಲ್ಲಿ ಹರಿಜನರು ಯಾವ ವಿಚಾರಗಳನ್ನೂ ಕೇಳದಿರುವ ರೀತಿಯಲ್ಲಿ ಬಡ್ಜೆಟ್ಟನ್ನು ತಯಾರಿಸಬೇಕೆಂದು ನಾನು ಕೇಳಿಕೊಂಡಿದ್ದೆ.

ಆ ನನ್ನ ಆಸೆ ನಿರಾಸೆಯಾಗಿದೆ. ಏಕೆಂದರೆ, ಈಗ ತಾನೆ ಪಬ್ಲಿಕ್ ಸರ್ವಿಸ್ ಕಮಿಷನರ ರಿಪೋರ್ಟ್ ಬಂದಿದೆ. ಅದರಲ್ಲಿ ಸೂಚಿಸಿರುವಂತೆ, ಗೆಜೆಟೆಡ್ ಮತ್ತು ನಾರ್‌ಗೆಜೆಟೆಡ್ ಹುದ್ದೆಗಳಲ್ಲಿ ನಮ್ಮವರ ಸಂಖ್ಯೆಯನ್ನು ನೋಡಿದರೆ ಬಹಳ ವಿಷಾದವಾಗುತ್ತಿದೆ; ಯಾವ ಮಟ್ಟದಲ್ಲಿದೆಯೆಂಬುದು ಹೇಳುವಹಾಗಿಲ್ಲ. ಹೀಗಿರುವಾಗ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಹುದ್ದೆಗಳನ್ನು ಯಾವ ರೀತಿ ಹಂಚಿ ಇತರ ಜನರ ಮಟ್ಟಕ್ಕೆ ನಮ್ಮವರ ಸಂಖ್ಯೆಯನ್ನು ತರುತ್ತೀರೋ ಗೊತ್ತಿಲ್ಲ. ಒಂದು ವೇಳೆ ಆವಶ್ಯಕವಾದರೆ, ಹತ್ತು ವರ್ಷ ಎಂದು ನಿಗದಿಮಾಡಿಕೊಂಡಿರುವುದನ್ನು 20-30 ವರ್ಷಕ್ಕೆ ಹೆಚ್ಚುಮಾಡಿ. ಹಾಗಿಲ್ಲದೆ, ಈಗಿರುವ ನಿರ್ದಿಷ್ಟ ಕಾಲದಲ್ಲೇ Backward Class Commission ಅವರು ಹೇಳುವ ಹಾಗೆ ಎಲ್ಲರ ಮಟ್ಟಕ್ಕೆ ನಮ್ಮ ಜನಾಂಗವನ್ನೂ ತರಬೇಕಾದರೆ ಯಾವ ರೀತಿಯ ಏರ್ಪಾಡು ಮಾಡುತ್ತೀರೋ ಗೊತ್ತಿಲ್ಲ. ಗೆಜೆಟೆಡ್ ಹುದ್ದೆಗಳಲ್ಲಿ ಶೇಕಡ 1.8ರಷ್ಟು ಮಾತ್ರ Depressed Classನವರಿದ್ದಾರೆ. ನಾರ್‌ಗೆಜೆಟೆಡ್ ಹುದ್ದೆಗಳಲ್ಲೂ ಕೂಡ ಶೇಕಡ 5.68 ಮಾತ್ರ ಇದ್ದಾರೆಂದು ಇಲ್ಲಿ ನಮೂದಿಸಿದ್ದಾರೆ. ಇದೂ ಎಷ್ಟು ನಿಜವೋ ಗೊತ್ತಿಲ್ಲ. ನಿಜವೆಂದು ಭಾವಿಸಿದರೂ, ಈಗ ಉಳಿದಿರುವ ನಿರ್ದಿಷ್ಟ ಕಾಲದಲ್ಲಿ ಯಾವ ರೀತಿ ಹೆಚ್ಚಿಸುತ್ತೀರೋ ಗೊತ್ತಿಲ್ಲ. ಏಕೆಂದರೆ, ನೀವು ಮಾಡಿಕೊಂಡಿರುವ ಪ್ರಕಾರವೇ ಶೇಕಡ 16⅔ಗೆ ಏರಿಸಬೇಕಾಗಿದೆ. ಹೀಗಿರಬೇಕಾದರೆ, ಇಂಡಿಯಾ ಸರ್ಕಾರದಿಂದ ಶೇಕಡ 18ಕ್ಕೆ ಏರಿಸಬೇಕೆಂದು ಸೂಚನೆ ಬಂದಿದೆಯೆಂದು ಹೇಳಿದ್ದಾರೆ. ಇದು promotionನಿಗೆ ಅನ್ವಯಿಸುವುದಿಲ್ಲ, ರಿಕ್ರೂಟ್‌ಮೆಂಟಿಗೆ ಮಾತ್ರ ಅನ್ವಯಿಸುತ್ತದೆಂದು ಬೇರೆ ಹೇಳುತ್ತಾರೆ. ಮೊನ್ನೆತಾನೆ ಅಮಲ್ದಾರರುಗಳನ್ನು ತೆಗೆದುಕೊಂಡರು. ಉದ್ದೇಶಪೂರ್ವಕವಾಗಿಯೋ ಏನೋ ನಮ್ಮವರಿಗೊಬ್ಬರಿಗೂ ಕೊಟ್ಟಿಲ್ಲ. ಆದ್ದರಿಂದ ಒಂದು ಕಾನೂನು ಮಾಡಿ ಸಭೆಯಲ್ಲಿ ಪಾಸು ಮಾಡಿದ್ದರೂ ಅದನ್ನು ಸರ್ಕಾರದವರೇ ಸರಿಯಾಗಿ ಜಾರಿಗೆ ಕೊಡುತ್ತಿಲ್ಲವೆಂದು ನಾನು ವಿಷಾದದಿಂದ ಹೇಳುತ್ತೇನೆ.

ಸ್ಕಾಲರ್‌ಷಿಪ್ಪುಗಳ ವಿಚಾರ. ಆದಿಕರ್ಣಾಟಕರಲ್ಲಿ ಶೇಕಡ 99 ಜನರು ಬಡವರಾಗಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ವರ್ಷೇ ವರ್ಷೇ ಸ್ಕಾಲರ್‌ಷಿಪ್ ಕೊಡುವ ವಿಚಾರವನ್ನು ಈಗ್ಗೆ ಮೂರು ವರ್ಷಗಳಿಂದಲೂ ನಾನು ಕೇಳುತ್ತಲೇ ಇದ್ದೇನೆ. ಯೂನಿವರ್ಸಿಟಿ ಸ್ಕಾಲರ್‌ಷಿಪ್ಪಿನಲ್ಲ ವರ್ಷಕ್ಕೆ 80,000 ರೂಪಾಯಿಗಳು ಲ್ಯಾಪ್ಸ್ ಆಗುತ್ತಿವೆ, ಅದನ್ನಾದರೂ ವರ್ಗಾಯಿಸಿಕೊಡಿ ಎಂದು ಹೇಳಿದರೂ ಏಕೋ ಕೊಟ್ಟಿಲ್ಲ. 400 ಅಪ್ಲಿಕೇಷನ್‌ಗಳು ಬಂದಿವೆ, ಕೇವಲ 50 ಜನರಿಗೆ ಸ್ಕಾಲರ್‌ಷಿಪ್ ಕೊಡುವುದು ಬಹಳ ವಿಷಾದಕರ. ಸ್ಕಾಲರ್‌ಷಿಪ್ ಸಿಕ್ಕದೆ ಅನೇಕ ಆದಿಕರ್ಣಾಟಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನೇ ಬಿಡುವ ಸ್ಥಿತಿಯಲ್ಲಿದ್ದಾರೆಂದರೂ ಉತ್ಪ್ರೇಕ್ಷೆಯಲ್ಲ. ಸರ್ಕಾರಿ ಹಾಸ್ಟಲುಗಳಲ್ಲಿ ತಿಂಗಳಿಗೆ ಒಬ್ಬ ವಿದ್ಯಾರ್ಥಿಗೆ 6 ರೂಪಾಯಿಗಳಂತೆ ಬಹಳ ವರ್ಷಗಳಿಂದಲೂ ಕೊಡುತ್ತಿದ್ದೀರಿ. ಆರು ರೂಪಾಯಿನಂತೆ ಕೊಟ್ಟರೆ ಅವರು ಈಗಿನ ಕಾಲದಲ್ಲಿ ಜೀವನ ಮಾಡುವುದು ಹೇಗೆ! ಅವನ standard of living ಏನು? ಏಡೆಡ್ ಹಾಸ್ಟಲುಗಳಲ್ಲಿಯೇ 12 ರೂಪಾಯಿಗಳನ್ನು ಕೊಡುತ್ತಿರುವಾಗ ಸರ್ಕಾರದವರು ಕೊಡುವುದರಲ್ಲಿ ಈ ರೀತಿಯ standard ಗೊತ್ತು ಮಾಡಿದರೆ ಏನು ಹೇಳೋಣ? ಇದನ್ನು ಹೆಚ್ಚಿಸಬೇಕೆಂದು ಪದೇ ಪದೇ ಹೇಳಿದರೂ ಸರ್ಕಾರದವರು ಗಮನಕೊಟ್ಟಿಲ್ಲ. ಮುಂದೆಯಾದರೂ ಗಮನಿಸುತ್ತಾರೆಂದು ನಂಬಿದ್ದೇನೆ.

ಜಮೀನುಗಳ ವಿಚಾರದಲ್ಲಿ, ಆದಿಕರ್ಣಾಟಕರಿಗೆ ಜಮೀನು ಕೊಡುತ್ತೇವೆ, ಜಮೀನಿಲ್ಲದಿರುವವರಿಗೆಲ್ಲರಿಗೂ ಜಮೀನು ಸಿಕ್ಕುತ್ತದೆ ಎಂದು ಹೇಳಿದ್ದೂ ಹೇಳಿದ್ದೆ. ನಾವು ಸರ್ಕಾರದವರಲ್ಲಿ ಅರಿಕೆ ಮಾಡಿಕೊಂಡಿದ್ದೂ ಮಾಡಿದ್ದೆ. ಈಗ ಉಳಿದಿರುವುದೆಲ್ಲಾ ಈಚಲು ವನಗಳು, ಗೋಮಾಳಗಳು, Forest ಮುಂತಾದುವು. ಆದ್ದರಿಂದ ಇರತಕ್ಕ ಜಮೀನನ್ನು redistribute ಮಾಡದೆ ಹೋದರೆ, ಅಂದರೆ, ತಾವು ceiling limitನ್ನು ಮಾಡದೇ ಹೋದರೆ, ಬಹಳ ಕಷ್ಟ. ಇಲ್ಲದಿದ್ದರೆ ನೀವು ಹೇಳಿರುವಂತೆ socialistic pattern of society ಬರಲಾರದು. ಉದಾಹರಣೆಗೆ ಡಿಪ್ರೆಸ್ಡ್ ಕ್ಲಾಸ್ ರೂಲ್ಸ್ ಪ್ರಕಾರ ರೆವಿನ್ಯೂ ಕಮಿಷನ್ನಿನವರು 12-2-1951 ರಲ್ಲಿ ಒಬ್ಬನಿಗೆ ಜಮೀನನ್ನು ಸ್ಥಳದಲ್ಲೇ ಹೋಗಿ ವಿಚಾರಣೆ ಮಾಡಿ ಕೊಟ್ಟಿದ್ದರು. ಹಿಂದೆ ಅಧಿಕಾರಿಗಳು ಹುಜೂರು ಜಮಾಬಂದಿಯ ಕಾಲದಲ್ಲಿ ಪ್ರವಾಸ ಹೋಗಿದ್ದಾಗ್ಗೆ ಆಯಾ ಸ್ಥಳದಲ್ಲಿ ಜಮೀನಿಲ್ಲದವರು ಯಾರಿದ್ದಾರೋ ಕರೆಸಿಕೊಂಡು ಸ್ಥಳದಲ್ಲೇ ಆರ್ಡರ್ ಮಾಡಿ ಜಮೀನು ಕೊಡುತ್ತಿದ್ದರು. ಅದೇ ಪ್ರಕಾರ ಶ್ರೀಮಾನ್ ನಾಗರಾಜರಾಯರು 1951ನೆಯ ಇಸವಿಯಲ್ಲಿ ತಾವೇ ಖುದ್ದಾಗಿ ನೋಡಿ ಜಮೀನಿಲ್ಲದವನಿಗೆ ಕೊಟ್ಟಿದ್ದಂಥ ಎರಡು ಎಕರೆಯನ್ನು, ಈಚೆಗೆ ತಕರಾರು ಬಂತೆಂದು ಹೇಳಿ, ಡಿಸೆಂಬರ್ 1954ರಲ್ಲಿ, ಅದೇ ರೆವಿನ್ಯೂ ಕಮಿಷನರು cancel ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಬರೆದು cancel ಮಾಡಿಸಿದ್ದಾರಲ್ಲಾ! ಇದನ್ನೇಕೆ ಹೇಳುತ್ತಿದ್ದೇನೆಂದರೆ—ಸರ್ಕಾರದದವರು ಆದಿಕರ್ಣಾಟಕರನ್ನು ಉದ್ಧಾರ ಮಾಡಬೇಕೆಂಬ policyಯನ್ನೇನೋ ಇಟ್ಟುಕೊಂಡಿದ್ದಾರೆ; Constitutionನಿನ ಪ್ರಕಾರವೇ ಮಾಡಿದ್ದಾರೆ, ನಿಜ. ಆದರೆ ಕಾರ್ಯತಃ ನೋಡಿದಲ್ಲಿ ಧೈರ್ಯವಿಲ್ಲವೋ ಅಥವಾ ದಾಕ್ಷಿಣ್ಯಕ್ಕೆ ಕಟ್ಟುಬಿದ್ದೋ ತಮ್ಮ ನೀತಿಗನುಸಾರವಾಗಿ ನಡೆಯುತ್ತಿಲ್ಲ. ಈ ಅಂಶವನ್ನು ಮನಗಂಡು ಸರ್ಕಾರದವರು ಇಂಥ ವಿಷಯಗಳನ್ನು ಪುನಃ-ವಿಮರ್ಶೆ ಮಾಡಿ ಜಮೀನಿಲ್ಲದವರಿಗೆ ಜಮೀನು ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಎಷ್ಟೋ ಜನ, ತಂದೆಗೆ 25 ಎಕರೆ ಜಮೀನಿದ್ದರೂ ಮಗನಿಗೆ ಜಮೀನಿಲ್ಲವೆಂದು ಹೇಳಿ, ಆದಿಕರ್ಣಾಟಕರಿಗೆ ದೊರೆಯಬಹುದಾಗಿದ್ದ ಜಮೀನುಗಳನ್ನು ತಪ್ಪಿಸಿರುತ್ತಾರೆ. ಅದಕ್ಕೆ ಸರಿಯಾಗಿ ಕೆಳಗಿನ ಅಧಿಕಾರಿಗಳೂ ರಿಕಾರ್ಡ್‌ಗಳನ್ನು build up ಮಾಡಿ ಜಮೀನನ್ನು ಕೊಡಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಹರಿಜನರ ಸಮಸ್ಯೆಯನ್ನು ತಾವು ಉದಾರವಾಗಿ ನೋಡಬೇಕು. ಅವರೂ ಮನುಷ್ಯರು; ಅವರು ಅಭಿವೃದ್ಧಿಗೆ ಬಂದರೆ ದೇಶಕ್ಕೆ ಕಲ್ಯಾಣವಾಗುತ್ತದೆ. ನಮ್ಮ ದೇಶದಲ್ಲಿ ಐದನೆಯ ಒಂದು ಭಾಗದಷ್ಟು ಜನ ಹರಿಜನರೇ ಆಗಿದ್ದಾರೆ. ಸಮತಾವಾದವನ್ನು ತಾವೂ ಅನುಸರಿಸ ಹೊರಟಿದ್ದೀರಿ. ಅಂಥಾದ್ದರಲ್ಲಿ ನಮ್ಮ ಜನರನ್ನು ಮುಂದಕ್ಕೆ ತರದೇ ಹೋದರೆ ನಮ್ಮ ಸ್ವರಾಜ್ಯ ಉಳಿಯುವುದಿಲ್ಲವೆಂಬುದನ್ನು ತಿಳಿದು ಇದನ್ನು ಸರಿಮಾಡುತ್ತೀರೆಂದು ನಾನು ನಂಬಿದ್ದೇನೆ.

ಇನ್ನೊಂದು ವಿಷಯ. ಪಾನನಿರೋಧದ ವಿಚಾರವಾಗಿ ಒಂದೆರಡು ಮಾತು ಹೇಳಬೇಕಾಗಿದೆ. ನಮ್ಮ ಎಕ್ಸೈಜ್ ಮಂತ್ರಿಗಳು ಇಲ್ಲಿಲ್ಲ. ಇದನ್ನು ಎಲ್ಲಾ ಕಡೆಯಲ್ಲೂ ಜಾರಿಗೆ ತಂದಿದ್ದರೆ ಬಡ ಜನರಿಗೆ ಬಹಳ ಅನುಕೂಲವಾಗುತ್ತಿತ್ತು.

(ಶ್ರೀ ಎಂ. ಚಿಕ್ಕಲಿಂಗಯ್ಯ.)

3-30 P.M.

ಈ ಪಾನನಿರೋಧದ ವಿಚಾರದಲ್ಲಿ ಆ ಅಗರವಾಲ ಕಮಿಟಿಯವರೂ ಕೂಡ ಇದನ್ನು ಕೂಡಲೇ ಎಲ್ಲಾ ಕಡೆಯೂ ಜಾರಿಗೆ ತರಬೇಕೆಂದೇ ತಿಳಿಸಿದ್ದಾರೆ. ಇದನ್ನೇನೂ ಇಂಟ್ರಡ್ಯೂಸ್ ಮಾಡಕೂಡದು ಎಂದು ಎಲ್ಲಿಯೂ ಹೇಳಿಲ್ಲ. ಆದುದರಿಂದ ಇದನ್ನು ಸಂಸ್ಥಾನಾ ಮಳೆ ಕೂಡಲೇ ಜಾರಿಗೆ ತಂದು ಇದನ್ನು ಜಯಪ್ರದಗೊಳಿಸತಕ್ಕ ಬಗ್ಗೆ ಏನೇನು ಕಾರ್ಯಾಚರಣೆಗಳನ್ನು ಕೈಗೊಳ್ಳಬೇಕೊ ಅವುಗಳನ್ನೆಲ್ಲಾ ಶೀಘ್ರವಾಗಿ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ತಾವು ಬೇಗ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಇದನ್ನು ಜಾಗ್ರತೆ ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ಈ ಹರಿಜನರ ಹಾಸ್ಟಲ್ ಕಟ್ಟಿಸತಕ್ಕ ಬಗ್ಗೆ 5-6 ಲಕ್ಷ ರೂಪಾಯಿಗಳನ್ನು ಎತ್ತಿಟ್ಟಿದ್ದೀರಿ. ಹೋದ ವರ್ಷ ಈ ಬಾಬಗೆ ತೆಗೆದಿಟ್ಟಿದ್ದ ಮೊಬಲಗಿನಲ್ಲಿ ಕೇವಲ ಒಂದು ಲಕ್ಷ ಮಾತ್ರ ಖರ್ಚಾಗಿತ್ತು. ಇನ್ನು ಹಾಗೆ ಇದರ ಉಳಿದ ಮೊಬಲಗೇನಾಯಿತೋ ಗೊತ್ತಾಗಿಲ್ಲ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಮೊದಲು ಮಾತ್ರ ದೊಡ್ಡದಾಗಿ ಬಡ್ಜೆಟ್ಟಿನಲ್ಲಿ ಹಣವನ್ನು ತೆಗೆದಿಟ್ಟು ಅನಂತರ ಆಯಾ ಇಲಾಖಾ ಮೊಖ್ತೇಸರರಿಗೆ ಆ ಕೆಲಸದಲ್ಲಿ ರಿಟ್ರೆಂಚ್ ಮಾಡಬೇಕೆಂದು ತಿಳಿವಳಿಕೆ ಕೊಡತಕ್ಕದ್ದು ಸರಿಯಾದುದಲ್ಲ. ಇದನ್ನು ನಾನು ಬಹಳ ವ್ಯಥೆಯಿಂದ ಮತ್ತು ವಿಷಾದದಿಂದ ಹೇಳುತ್ತಿದ್ದೇನೆ. ಈ ಹರಿಜನರ ಸಮಸ್ಯೆ ಬಹಳ ಮುಖ್ಯವಾದದ್ದು. ಇದನ್ನು ತಾವೊಂದು ಉದಾರ ಭಾವನೆಯಿಂದ ಪರಿಶೀಲನೆ ಮಾಡಬೇಕು. ಮುಂದಿನ ಸಾಲಿನಿಂದ ಈ ಸಮಸ್ಯೆಯನ್ನು ಹರಿಜನ ಸಮಸ್ಯೆಯೆಂದು ತರದೆ ಕಾಮನ್ ಮ್ಯಾನ್ ಸಮಸ್ಯೆಯೆಂದು ತರಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri B. NARAYANASWAMY (Mysore City South).—Mr. Speaker, Sir, the time at my disposal is very short. There is a deficit budget and deficit also in time. At the very outset I would like to say that this Budget may be called a supplementary budget to the Central Budget. So long as we live in a system of integrated finance and commit ourselves to a development programme and as we have tied down ourselves to the tail end of the coat of the Central Finance Minister, a budget of this kind could only be expected. Still that does not mean to say that the Leader of the Opposition, my Hon'ble friend Sri Imam should get himself frightened. I respectfully submit that he should shake off his fear complex. So far as my friend Sri Srinivasa Iyengar is concerned, he has been more a mathematician and his speech was more of arithmetical calculations. In a matter like this, when we speak of budget, more of human factors come in and my friend Sri Srinivasa Iyengar could have left those arithmetical calculations—plus or minus or multiplication—to the Accountant-General or the Auditor-General. He could have told us how we could have improved the budget proposals or estimates tha have been placed before the House. But one thing that pained me very much was the remarks made by Sri Nagarajamurthy. He ought to have been more graceful to the political sufferers. He and I and several members of this House owe our position to the political sufferers. If to-day anything is to be done by the Government, much has to be done to the political sufferers, and mere granting of land is not enough. There are people unknown to us who are living in misery, who deserve our help, because they have sacrificed, suffered and those who have suffered, those who have sacrificed know what a political sufferer is. So far as my friend from Kolar is concerned, the Chief Minister anticipated what he would say. The Finance Minister in his speech has spoken of the Finance Commission and he has also spoken of the Industrial Corporation that is going to be set up and such other matters which the Opposition members should have taken note of and they could have offered constructive criticisms.

Coming to the subject proper, in my opinion, the salient features of this Budget are (1) the housing scheme or the scheme for the construction of houses for the low income groups (2) the Industrial Finance Corporation (3) the separation of the Judiciary from the Executive. These are the salient features.

Coming to the question of houses for the low income groups, I find here that one crore of rupees have been allotted and houses will be constructed for people who have an income of Rs. 500 and below. May I very humbly make this suggestion to Government? Let them take this opportunity of winning the love of non-gazetted officers; let all these amounts be ear-marked for the non-gazetted officers; let houses be built for them. Thereby they will be earning their gratitude and love.

Secondly, so far as the Industrial Corporation is concerned, I am very glad that it has been separated from the Industries Department. This Industries Department has been flooded with officers and men and I am sorry to say that they did not know the meaning of 'chemical industry.' After all, an Art Graduate like myself had to come to the rescue of the Home Minister. In the Department of Industries we have got 3 Directors, so many Deputy Directors and Assistant Directors.

Sri H. SIDDAVEERAPPA (Minister for Home and Industries).—May I intervene for a minute?

Mr. SPEAKER.—You can reply when you get the opportunity.

Sri B. NARAYANASWAMY.—When I speak of chemical industries, especially private chemical industries—on this I had put in one interpellation last year and this time also one interpellation. I asked the Government whether they have made a survey and the reasons. He did not know the meaning of 'chemical industry'. I do not know whether they know the meaning of 'chemical engineering'. I would like to be enlightened by the Industries Minister. Enough so far as the Industries are concerned. I am glad that the Industrial Finance Corporation is going to be set up.

Coming to the question of separation of the Judiciary from the Executive, it is a very moot point. I was very much impressed by the speech made by Sri D. Venkatesh. He has correctly pictured the position and the relationship between the Executive and the Judiciary. He has sounded a note of warning as to the way the relationship is between the Executive and the Judiciary. If these things remain like this, I think a time will come when the Legislature and the Parliament have to take note of such things. Separation of the Judiciary from the Executive is welcome; it is a matter that we are demanding for the last so many years and we are told that the Government is determined to separate the Judiciary from the Executive. In this connection I would like to say that nobody takes the separation of the Judiciary from the Executive as meaning that each department—the Executive or the Judiciary—should remain or live in isolation; it cannot remain in a water-tight compartment. There should be a happy and harmonious co-ordination between the two departments. In a democracy the Judiciary has to remain independent and if the independence of the Judciary is threatened, woe be to democracy. So also the Executive should be powerful. I do not mean to say that there has been such discordant note or circumstances as between the Executive and the Judiciary; but somehow there is a public opinion that there is some divergence between the Executive and the Judiciary. This could be seen if only the Hon'ble Members have read the Report on the Bangalore Race Course Club Enquiry Committee. There you will find that there has been some divergence. The Chief Justice of Mysore is the Steward nominated by the Rajpramukh and he is the Chairman of that Club. Here a Committee has been set up of which the Home Minister is the Chairman. What do we find in that Report? Nothing; no information is provided. I would ask the Government for an explanation—they are bound to offer an explanation—why the Race Club did not co-operate with the Government. There should be something else. We the members of this House should tell both the Executive and the Judiciary that there should exist a harmonious relationship between the two.

Mr. SPEAKER.—Your time is up.

Sri H. C. LINGA REDDY (Malur).—Mr. Speaker, Sir, I welcome wholeheartedly the budget proposals that have been presented to this Hon'ble House. The Budget is a bold one and not a bald one as some of my friends were characterising the other day. The budget proposals are very comprehensive. They have provided for very many nation-building activities very heavily. As some of my friends were pointing out, the amounts that have been provided for these developmental works have almost doubled and trebled and in some cases five or six times. Correspondingly the income also has increased no doubt but not to the same extent. Some friends

(SRI H. C. LINGA REDDY.)

were characterising that this budget every year comes as a shock and that there will be always deficit budgets and there will always be taxation measures and all these things and some also were saying that the Second Five-Year Plan that has been contemplated now by the State and Central Governments cannot be financed to the tune of Rs. 100 crores and all that. But it is unfortunate that the very same members have not given any suggestions for the improvement of the resources of the State. We should remember that we are trying to build up a Welfare State based on socialistic pattern. There was a time when there was the ideal of Police State only. The duty of the Government then was merely to collect taxes and to maintain law and order. But it is not so now. The departments are increasing and the activities of the departments are multiplying and the people are looking forward to the Government for so many amenities to be provided for. In that light we see the activities multiplying, the various schemes that have been newly launched, and the Budget that has been presented to us refers to so many of these new items of expenditure. For example, the Industrial Finance Corporation, hostels of a general kind, not of communal denominations that are contemplated and various other schemes that have been referred to and if all these schemes have got to be provided for, either we have to tax or cut down the expenditure. Our friends have not suggested that these items of expenditure should be cut down. They have been demanding that there should be more primary schools, more hospitals and that there should be more activities in the development departments. They require a good deal of money. Even under capital works, very heavy amounts have been provided for. Under Land Reforms, we have passed the Miscellaneous and Personal Inams Abolition Bill and that was about a year ago and the demand for the abolition of inams is as old as about a decade. Now conditions in inam villages have very much deteriorated. The relationship between the inamdar and the tenant is very unsatisfactory. All kinds of things are happening today in inam villages and I request Government to expedite the assent of the President to the Bill and to have it put on the Statute Book very early. No doubt, we are on the march so far as the land reforms are concerned. We have passed the Religious and Charitable Inams Abolition Bill recently and we are considering the Tenancy Amendment Bill and these Bills are intended to bridge the gulf between the rich and the poor. There are some more pieces of legislation that we have got to resort to if we have got to make land reforms progress. I think it is high time that we introduce ceilings on land holdings. We were hitherto upholding the ideal of Welfare State only. Now we have got to add on to that the socialistic pattern of society. The gulf between the big landlords and the poor tenants or ryots has to be bridged. I think an attempt has to be made on the part of the State Government to impose ceiling on land holdings to some extent. I request the Government to do it very early.

About scarcity areas, I am afraid, sufficient attention has not been given by the Government, and especially in Kolar District and in Malur Taluk in particular, rains are not good this year. There is even less than a four anna crop. I request the Government therefore to see that remissions are given and adequate relief measures are started in Malur Taluk and also in other areas of Kolar District and in other parts of the State where rains are not sufficient this year. With a view to improve the scarcity areas, I would request the Government to plan permanently by giving them lift irrigation pumps on large scale, by introducing cottage industries and making other facilities available with a view to enhance the economic standard, the living standard of the people of these areas.

About cottage industries, sericulture has been giving employment to a number of people. Unfortunately, we do not see that the State Government

is paying sufficient attention to the improvement of Sericulture. The Seed Control Act that has been promulgated now throughout the State has been working as a serious hardship to the sericulturist. It may be all right in the seed area. Because of its introduction in the other areas, what is happening is, there is a lot of black-market. I therefore request the Sericulture departmental heads to examine this aspect of the matter and see that it is not made applicable to all areas. Again, foreign silk is allowed to come into the country with the result that the prices of indigenous silk has fallen down. Therefore, I request the Government to give sufficient protection and urge the India Government not to allow imports of silk from other countries. With these remarks, I welcome the Budget.

* ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ಸ್ವಾಮಿ, 1955-56ನೆಯ ಸಾಲಿನ ಆಯವ್ಯಯದ ಅಂದಾಜುಗಳನ್ನು ಪರಿಶೀಲನೆ ಮಾಡುವಾಗ, ಇದನ್ನು ಸ್ವಾಗತಿಸುವ ಸಂದರ್ಭದಲ್ಲಿ ಇದರಲ್ಲಿರುವ ಕೆಲವು ಲೋಪದೋಷಗಳನ್ನೂ, ಕುಂದುಕೊರತೆಗಳನ್ನೂ ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ಇದರಲ್ಲಿ ಬಹುತೇಕ ನನ್ನ ಆಕ್ಷೇಪಣೆ ಹೆಚ್ಚಾಗಿರುವುದು ಮರಾಮತ್ತು ಇಲಾಖೆಯ ವಿಷಯದಲ್ಲಿ.

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಮೇಲೇಕೆ ನಿಮಗಿಷ್ಟು ಕಣ್ಣು? (ನಗು !)

ಶ್ರೀ ಎಚ್. ಕೆ. ಶಿವರುದ್ರಪ್ಪ.—ನಾನು ಪದೇಪದೇ ಈ ಸಭೆಯಲ್ಲಿ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಬೊಮ್ಮಲಾಪುರ, ದೇವರಹಳ್ಳಿ, ಕಲ್ಲುಕಟ್ಟೆ ಅಣೆಕಟ್ಟು ವಿಷಯವನ್ನು ನಾನು ಈ ಸಭೆಗೆ ಬಂದಲಾಗಾಯಿತು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಎಷ್ಟುಸಲ ಅರಿಕೆಮಾಡಿಕೊಂಡರೂ ಏಕೆ ಈ ವಿಚಾರವನ್ನು ಪರಿಶೀಲಿಸಲು ಪ್ರಯತ್ನ ಮಾಡಲಿಲ್ಲವೊ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ, ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡಿದರೆ, ಮೈಸೂರು ಜಿಲ್ಲೆಯ ವಿಚಾರದಲ್ಲಿ ಏಷ್ಟುಮಟ್ಟಿಗೆ ನಿಗಾ ಕೊಟ್ಟಿದ್ದಾರೆಂಬುದನ್ನು ಹೇಳುವುದಕ್ಕೆ ಸಂಕೋಚವಾಗುತ್ತದೆ. ಈ ಬಡ್ಜೆಟ್ಟನ್ನು ನೋಡಿದರೆ, ಅವರ ದೃಷ್ಟಿಯೆಲ್ಲಾ ಶಿವಮೊಗ್ಗ ಜಿಲ್ಲೆ, ಹಾಸನ ಜಿಲ್ಲೆ ಹಾಗೂ ಚಿಕ್ಕಮಗಳೂರುಗಳ ಮೇಲಿದೆಯೇ ಹೊರತು ಮೈಸೂರು ಜಿಲ್ಲೆಯಮೇಲೆ ಅದೇ ದೃಷ್ಟಿಯಿಲ್ಲವೆಂಬುದು ಕಾಣುತ್ತದೆ. ಇದೇನು ನಮ್ಮ ದುರದೃಷ್ಟವೋ ನನಗೆ ಗೊತ್ತಿಲ್ಲ. ಈ ಪಬ್ಲಿಕ್ ವರ್ಕ್ಸ್ ಇಲಾಖೆ ಹಿಂದೆ ಮಾನ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಎಲ್. ಸಿದ್ದಪ್ಪನವರಿಗೆ ಸಿಕ್ಕಿತ್ತು, ಅವರೂ ಶಿವಮೊಗ್ಗ ಜಿಲ್ಲೆಯವರು; ಅನಂತರ ಶ್ರೀಮಾನ್ ಎಚ್. ಸಿದ್ದಯ್ಯನವರಿಗೆ ಸಿಕ್ಕಿತು, ಅವರೂ ಶಿವಮೊಗ್ಗ ಜಿಲ್ಲೆಯವರು. ಈಗ ಅದನ್ನು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ತೆಗೆದುಕೊಂಡಿದ್ದಾರೆ, ಅವರೂ ಅದೇ ಜಿಲ್ಲೆಯವರು !

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಜಿಲ್ಲೆಯವರಾದ ಶ್ರೀಮಾನ್ ಮರಿಯಪ್ಪನವರು ಎರಡೂವರೆ ವರ್ಷ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದರು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹೀಗೆ ತೆಗೆದುಕೊಂಡಿದ್ದರಿಂದ ಅವರ ಜಿಲ್ಲೆಗೆ ಎಷ್ಟೋ ಅನುಕೂಲಗಳನ್ನು ಮಾಡಿದ್ದಾರೆ.

Mr. SPEAKER.—It is a very serious charge !

Sri Kadidal MANJAPPA.—I would like to request the Hon'ble Member to speak with reference to fact and figures.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ಜಿಲ್ಲೆ ಅಭಿವೃದ್ಧಿಯಾಗಬಾರದೆಂದು ನಾನು ಹೇಳುತ್ತಿಲ್ಲ, ಮಲೆನಾಡು ಇನ್ನೂ ಹೆಚ್ಚು ಅಭಿವೃದ್ಧಿಗೆ ಬರಲಿ, ನಿಮಗೆ ಆ ಕೀರ್ತಿ ಬರಲಿ. ಆದರೆ ಮೈಸೂರು ಜಿಲ್ಲೆಯ ವಿಚಾರದಲ್ಲಿ ಅಂಕಿಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿದ್ದೀರಾ ಎಂದು ಕೇಳುತ್ತೇನೆ. ಕೇವಲ ಒಂದೆರಡು ವಿನಾ ಹೆಚ್ಚಿನ ಕಾಮಗಾರಿಗಳು, ಕೆರೆಕಟ್ಟುವ ಕಾಮಗಾರಿಗಳನ್ನು ಅಲ್ಲಿ ತೆಗೆದುಕೊಂಡಿಲ್ಲ. ತಾವು ಇದನ್ನು ಪರಿಶೀಲನೆಮಾಡಿ, ಈ ಕೆಲಸವನ್ನು ಆಗಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಆ ಜಿಲ್ಲೆಯ ವಿಚಾರವನ್ನು ಪರಿಶೀಲನೆಮಾಡಬೇಕು.

ಇನ್ನು ಜಮೀನು ಹಂಚಿಕೆಯ ವಿಚಾರ. ಬಗರ್ ಹುಕುಂ ಸಾಗುವಳಿಗೆ ಎಲ್ಲಾಕಡೆಯೂ ಪ್ರೋತ್ಸಾಹ ಕೊಡುವಂತೆ ಕಾಣುತ್ತದೆ. ತಾವು ಜಮೀನು ಕೊಡುವುದರಲ್ಲಿ ನನ್ನ ಆಕ್ಷೇಪಣೆಯಿಲ್ಲ. ಆದರೆ ನೀವು ಕೊಡುವ ಜಮೀನು ರೈತನಿಗೆ ಜಾಗ್ರತೆ ಸಿಕ್ಕುವಂತೆ ಮಾಡಬೇಕು. ಗುಂಡ್ಲುಪೇಟೆ ತಾಲ್ಲೂಕು ಹುಲ್ಲೇಪುರದ ಸರ್ವೆ ನಂಬರು 62ರಲ್ಲಿ 1941ರ ಲಾಗಾಯ್ತು ಜಮೀನನ್ನು ಆಕ್ರಮಿಸಿಕೊಂಡು ಆಗಿನಿಂದಲೂ ತಕರಾರು ತಖ್ತೆಗಳು ಕೊಂಚ ಕೊಂಚ ಬರುತ್ತಿವೆ. ಸುಮಾರು ಹದಿನಾಲ್ಕು ವರ್ಷವಾದರೂ ಅವರಿಗೆ ಜಮೀನನ್ನು ವಹಿಸಿಕೊಟ್ಟಿಲ್ಲ. ಬರಿಯ ಜುಲ್ಮಾನೆ ಕೊಡುತ್ತಿದ್ದಾರೆ. ಅದೇ ತಾಲ್ಲೂಕು ಬೊಮ್ಮಲಾಪುರದ ಸರ್ವೆ ನಂಬರು 99ರ ಜಮೀನನ್ನು ರೈತರು ಕೇಳಿದರೆ ಕೊಡುವುದಕ್ಕಾಗುವುದಿಲ್ಲ ಅದು 'ಡೇಟ್ ರಿಜರ್ವ್' ಎಂದು ಹೇಳುತ್ತಿದ್ದಾರೆ. ಹಾಗಿದ್ದಮೇಲೆ ಅಲ್ಲಿ ಸಾಗುವಳಿಗೇಕೆ ಅವಕಾಶ ಕೊಟ್ಟಿದ್ದಾರೆ? ಇದರಲ್ಲಿ ನಿರ್ದಿಷ್ಟ ನೀತಿಯಿಲ್ಲ. ಡೇಟ್ ರಿಜರ್ವ್ ಆದಮೇಲೆ, ಅದನ್ನು ಕಾಪಾಡಬೇಕಲ್ಲವೆ? ಡೇಟ್ ರಿಜರ್ವ್ ಎಂದು ಇಟ್ಟುಕೊಳ್ಳುವುದೂ ಇಲ್ಲ, ಪೂರ್ತಿ ಕೊಡುವುದೂ ಇಲ್ಲ. ಈ ನೀತಿ ಸರಿಯಲ್ಲ. ಯಾರು ಸತ್ಪ್ರಜೆಯಾಗಿದ್ದಾರೋ ಅವರಿಗೆ ಸಿಕ್ಕುತ್ತಿಲ್ಲ: ಯಾರು ಗಂಡಾಗುಂಡಿಯಿಂದ ಆಕ್ರಮಿಸುತ್ತಾರೋ ಅವರಿಗೇ ಕಾಲವಾಗಿದೆ !

ಮಾನ್ಯ ಮಿತ್ರರನೇಕರಿಗೆ ಗೊತ್ತಿರುವಂತೆ, ನಮ್ಮ ಹಂಗಳದ ನೀರು ಸರಬರಾಯಿ ಯೋಜನೆಯ ವಿಚಾರದಲ್ಲಿ ಏನೂ ಮಾಡಿಲ್ಲ. ಅಲ್ಲಿ ಕುಡಿಯುವ ನೀರಿಗಾಗಿ ಜನ ಎಷ್ಟು ಕಷ್ಟಪಡುತ್ತಿದ್ದಾರೆಂಬುದು ಗೊತ್ತಿದೆ. ಅಂದಮೇಲೆ ಜನರ ಕಷ್ಟ ಎಷ್ಟುಮಟ್ಟಿಗೆ ಅರ್ಥವಾಗುತ್ತದೆ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಸರ್ಕಾರದವರು ಏನೂ ಮಾಡುವುದಿಲ್ಲವೆಂದು ನಾನು ಹೇಳುವುದಿಲ್ಲ, ಕೆಲವು ಉಪಕಾರ ಮಾಡಿದ್ದಾರೆ. ಡಾ॥ ನಾಗನಗೌಡರು ನಮ್ಮ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟು ಸಹಾಯಮಾಡಿದ್ದಾರೆ, ಮಾಡುತ್ತಿದ್ದಾರೆ. ಈ ದಿವಸ ನನ್ನ ಆಕ್ಷೇಪಣೆಯಿರುವುದು ರೆವಿನ್ಯೂ ಮಂತ್ರಿಗಳೂ ಹೀಗೆಯೇ ಈ ಉಪಕಾರ ಮಾಡಲಿಲ್ಲವಲ್ಲಾ ಎಂದು. ಅವರೂ ಮಾಡಬೇಕು.

* Asterisk indicates that the speech has not been revised by the Member concerned.

(ಶ್ರೀ ಎಚ್. ಕೆ. ಶಿವರುದ್ರಪ್ಪ.)

ಒಂದುವೇಳೆ ಹಾಗೆ ಮಾಡಲು ತಮಗೆ ಶಕ್ತಿಯಿಲ್ಲದಿದ್ದರೆ ತಮ್ಮ ಪೋರ್ಟ್ ಫೋಲಿಯೋ ಡಾ|| ನಾಗನಗೌಡರಿಗೇ ಬಿಟ್ಟುಕೊಟ್ಟರೆ ಬಹಳ ಉಪಕಾರವಾಗುತ್ತದೆ.

Sri Kadidal MANJAPPA.—I must say, Sir, that portfolios are not changed at the whims and fancies of individual Members.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಬೆಂಗಳೂರಿನಿಂದ ಗುಂಡ್ಲುಪೇಟೆಗೆ ಮೊನಾಪಲಿ ಬಸ್‌ರೂಟ್ ಇದೆ. ಊಟಿಗೆ ಹೋಗುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರು. ಗುಂಡ್ಲುಪೇಟೆಯಿಂದಾಚೆಗೆ ನಮ್ಮ ಮೈಸೂರು ದೇಶದ ಗಡಿ ಇದೆ, ಅಲ್ಲಿಯವರೆಗಾದರೂ ಈ ರೂಟನ್ನು ಮುಂದುವರಿಸಿ ನಮ್ಮ ಸರ್ಕಾರಿ ಬಸ್ಸುಗಳು ಹೋಗುವುದಕ್ಕೆ ಅವಕಾಶ ಕೊಡಬೇಕು. ಮದರಾಸಿನವರೂ ಅವಕಾಶ ಕೊಡಬಹುದೆಂದು ಕಾಣುತ್ತದೆ.

ಹೆಗ್ಗಡದೇವನಕೋಟೆ ಗುಂಡ್ಲುಪೇಟೆಯಲ್ಲಿ ಹೆಲ್ತ್ ಯೂನಿಟ್ ಮಾಡಿದರು. ಅದನ್ನು ಮಾಡುವಾಗ ಗುಂಡ್ಲುಪೇಟೆಯ ಆಸ್ಪತ್ರೆಯನ್ನು ಹೆಲ್ತ್ ಯೂನಿಟ್ ಆಗಿ ಪರಿವರ್ತನೆ ಮಾಡಿದ್ದಾರೆ. ಮಾಡುವಾಗ ಗುಂಡ್ಲುಪೇಟೆಯನ್ನು ಎರಡು ಭಾಗಮಾಡಿ ಮಲೆನಾಡು ಮೈದಾನ ಎಂದು ಮಾಡಬಹುದಾಗಿತ್ತು. ಒಂದು ಪ್ರದೇಶದಲ್ಲಿ ಮಾತ್ರ ಹೆಲ್ತ್ ಯೂನಿಟ್ ಮಾಡಿದ್ದಾರೆ. ಈಗಲಾದರೂ ಉಳಿದಿರುವ ಮೂರು ಆಸ್ಪತ್ರೆಗಳನ್ನು 1955-56ನೆಯ ಇಸವಿಯಲ್ಲಿ ಹೆಲ್ತ್ ಯೂನಿಟ್‌ಗಳಾಗಿ ಪರಿವರ್ತನಗೊಳಿಸಬೇಕೆಂದು ಸಲಹೆಮಾಡುತ್ತೇನೆ.

ನಮ್ಮ ತಾಲ್ಲೂಕಿಗೆ ಬುಲ್ ಡೋಜರುಗಳನ್ನು ಕಳುಹಿಸುತ್ತಿಲ್ಲ, ಈ ಇಲಾಖೆ ಹುಟ್ಟಿದಲಾಗಾಯ್ತು ನಮ್ಮ ತಾಲ್ಲೂಕಿಗೆ ಒಂದು ಬುಲ್‌ಡೋಜರಾದರೂ ಬಂದು ಕೆಲಸಮಾಡಿಲ್ಲ. ಅಲ್ಲಿ ಇದರ ಅವಶ್ಯಕತೆ ತುಂಬ ಇರುವುದರಿಂದ ದಯವಿಟ್ಟು ಮಂತ್ರಿಗಳು ಇದಕ್ಕೆ ಗಮನಕೊಡಬೇಕು.

4 P.M.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಧ್ಯಕ್ಷರೆ, ಈ ಹೊತ್ತು ಬೆಳಗ್ಗೆಯಿಂದ ಕಷ್ಟಪಟ್ಟದ್ದಕ್ಕೆ ಈಗ ಮಾತನಾಡಲು ಹತ್ತು ನಿಮಿಷದ ಅವಧಿ ನನಗೆ ಸಿಕ್ಕಿದೆ. ಈ ಅಲ್ಪ ಅವಧಿಯಲ್ಲಿ ಆಯವ್ಯಯದ ಅಂದಾಜನ್ನು ಎಷ್ಟರಮಟ್ಟಿಗೆ ಪರಿಶೀಲಿಸಬಹುದೆಂಬ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ಆದರೂ ಒಂದೆರಡು ವಿಷಯಗಳನ್ನಾದರೂ ಹೇಳಲಿಚ್ಛಿಸುತ್ತೇನೆ. ಮಹಾ ಚುನಾವಣೆಯಾದನಂತರ ಈ ನಾಲ್ಕನೆಯ ಬಡ್ಜೆಟ್ಟನ್ನು ನಾವು ನೋಡುತ್ತಿದ್ದೇವೆ. ಈ ನಾಲ್ಕು ಆಯವ್ಯಯದ ಅಂದಾಜುಗಳನ್ನೂ ಪರಿಶೀಲಿಸಿದ್ದೇ ಆದರೆ, ನಮ್ಮ ದುರದೃಷ್ಟವೋ ಏನೋ ಆ ಆಯವ್ಯಯದ ಅಂದಾಜುಗಳೆಲ್ಲಾ ಬರೀ ಪೋತಾ ಬಡ್ಜೆಟ್ಟುಗಳೇ ಆಗಿವೆ. ಇದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಸರ್ಕಾರವನ್ನು ರಚಿಸಿರುವ ಮತ್ತು ನಡೆಸಿಕೊಂಡು ಬಂದಿರುವ ಕಾಂಗ್ರೆಸ್ ಪಾರ್ಟಿಯವರು ಈ ಪೋತಾ ಬಡ್ಜೆಟ್ ಬಹಳ ಉತ್ತಮವಾದ ಬಡ್ಜೆಟ್, ದೇಶದ ಉನ್ನತಿಗೆ ಇದೇ ತಳಹದಿ, ಈ ಪೋತಾ ಬಡ್ಜೆಟ್ಟನ್ನು ಹೊತ್ತು ನಮ್ಮ ದೇಶದ ಜವಾಬ್ದಾರಿಯನ್ನು ಹೊರಲು ಲಾಯಕ್ಕಾದವರು ಎಂದು ಹೇಳುತ್ತಾ ಬಂದಿದ್ದಾರೆ. ಇದನ್ನು ಪರಿಶೀಲನೆ ಮಾಡಿನೋಡೋಣ. ನಾಲ್ಕು ವರ್ಷಗಳ ಅವಧಿಯಲ್ಲಿ ಇವರ ದಕ್ಷತೆ ಎಷ್ಟು ಉತ್ತಮ ದರ್ಜೆಯಲ್ಲಿದೆ ಎಂಬುದನ್ನು ನೋಡಿದ್ದೇ ಆದರೆ ಒಂದು ಕಡೆ ತೆರಿಗೆಗಳ ಸುರಿಮಳೆ ಮತ್ತೊಂದು ಕಡೆ ಸಾಲದ ಹೊರೆ—ಎರಡನ್ನೂ ಉತ್ತಮವಾದ ನೀತಿಯೆಂದು ದೇಶದ ಮುಂದೆ ಇಟ್ಟಿದ್ದಾರೆ. ಸಂಸಾರದಲ್ಲಿಯೂ ಇದೇ ನೀತಿಯನ್ನು ಅನುಸರಿಸಿದ್ದೇ ಆದರೆ, ಸಂಸಾರದ ಗತಿ ಮುಗಿದೇ ಹೋಯಿತು. ಒಂದು ಸಂಸಾರದ ಬಡ್ಜೆಟ್ಟನ್ನು ಅವಲಂಬಿಸಿಯೇ ದೇಶದ ಬಡ್ಜೆಟ್ ಇರುತ್ತದೆ. ಸಂಸಾರವಿಲ್ಲದ ದೇಶವಿಲ್ಲ. ವ್ಯಕ್ತಿ ಇಲ್ಲದೆ ಸಂಸಾರವಿಲ್ಲ. ಆದ್ದರಿಂದ ಸರ್ಕಾರದ ಆಯವ್ಯಯದ ಅಂದಾಜೇ ಪೋತ ಆಗಿರುವಾಗ ಸಂಸಾರದ ಆಯವ್ಯಯ ಅಂದಾಜ ಮತ್ತಷ್ಟು ಪೋತಾ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತೆರಿಗೆಗಳನ್ನು ಹಾಕುವುದರಲ್ಲಿ ಸರ್ಕಾರ ಯಾವ ರೀತಿನೀತಿಯನ್ನು ಅನುಸರಿಸುತ್ತಿದ್ದಾರೆಂದರೆ ಆಯವ್ಯಯ ಅಂದಾಜಿನ ಪೋತಾವನ್ನು ಸರಿಪಡಿಸಲು ತೆರಿಗೆಗಳನ್ನು ಹಾಕಬೇಕು ಎನ್ನುವುದು. ತೆರಿಗೆಯನ್ನು ಹಾಕಿ ದೇಶದ ಉತ್ಪತ್ತಿ ಹೆಚ್ಚಿಸಬೇಕು ಎಂಬುದು ಅವರ ನೀತಿ ಅಲ್ಲ ಎಂದು ಖಡಾ ಖಂಡಿತವಾಗಿ ಹೇಳಬಹುದು. ನಾಲ್ಕು ವರ್ಷಗಳ ಅವಧಿಯಲ್ಲಿ ಸಾಲವನ್ನು ಯಾವ ರೀತಿ ತೆಗೆದುಕೊಂಡಿದ್ದಾರೆಂದರೆ ಈ ಸಾಲಕ್ಕೆಲ್ಲಾ ಬಡ್ಡಿಯನ್ನು ಕೊಡುವುದಕ್ಕೆ ಉತ್ಪತ್ತಿ ಇಲ್ಲದೇ ಇದೆ. ಸಾಲದ ರೂಪದಲ್ಲಿ ಬಂದ ಹಣವನ್ನು Industrial concernಗಳಲ್ಲಿ ಹಾಕಿದ್ದಾರೆ. ಆದರೆ ಇತ್ತೀಚಿನವರೆಗೂ invest ಮಾಡಿರುವ ಹಣಕ್ಕೆ ಬಡ್ಡಿಯನ್ನು ವಸೂಲು ಮಾಡುತ್ತಿರಲಿಲ್ಲ. ಆದರೆ ಇತ್ತೀಚೆಗೆ ಬಡ್ಡಿಯನ್ನು ವಸೂಲ್ ಮಾಡುತ್ತಿರಲಾಗುತ್ತಿದೆ ಎಂದು ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಯಾವ ತಾರೀಖಿನಿಂದ ಬಡ್ಡಿಯನ್ನು ಸೇರಿಸುವ ಪದ್ಧತಿಯನ್ನು ಜಾರಿಗೆ ಸರಕಾರದವರು ತಂದಿದ್ದಾರೆಂಬುದು ಸಂಶಯವಾಗಿದೆ. Audit Reportನಲ್ಲಿ ನೋಡಿದ್ದೇ ಆದರೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಮೊದಲಿನಿಂದಲೂ ಆ ರೀತಿ ಮಾಡುತ್ತಾ ಇದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಅದು 1950-51ರಲ್ಲಿ ಇರಲಿಲ್ಲ. ಆಡಿಟ್ objectionನಲ್ಲಿ ತಿಳಿಸಿದ್ದಾರೆ. ಅದರಂತೆ ನಡೆದುಕೊಳ್ಳುವುದಾಗಿ ರಿಪೋರ್ಟ್ ಮಾಡಿದ್ದಾರೆ. ವ್ಯಕ್ತಿಗಳಿಗಾಗಿ ಇಲಾಖೆಗಳನ್ನು ಸ್ಥಾಪನೆ ಮಾಡುವುದು ಅಥವಾ ಇಲಾಖೆಗಳಿಗಾಗಿ ವ್ಯಕ್ತಿಗಳನ್ನು ಉತ್ಪತ್ತಿಮಾಡುವುದು ಸರ್ಕಾರದ ಸಾರೋದ್ಧಾರವಾದ ನೀತಿ ಎಂದು ಕಾಣುತ್ತದೆ. ತೆರಿಗೆಗಳನ್ನು ಹೆಚ್ಚಿಸಿದಂತೆ, ಸಂಸ್ಕೃತಿ ಪ್ರಚಾರ ಯೋಜನೆ, Anti-Corruption Committees ಮತ್ತು ಅನೇಕ ನಿಷ್ಪ್ರಯೋಜಕವಾದ ಕೆಲವು ಇಲಾಖೆಗಳಿಗೆ ಅನಾವಶ್ಯಕ ಖರ್ಚು ಆಗುತ್ತಿದೆ. ಅದರಿಂದ ಯಾವ ವಿಧವಾದ ಪ್ರಯೋಜನವೂ ಇಲ್ಲ.

Sri Kadidal MANJAPPA.—Which are those anti-corruption committees that Government have constituted?

ಶ್ರೀ ಯು. ಎಂ. ಮಾದಪ್ಪ.—Anti-corruption Measures ಸಂದರ್ಭದಲ್ಲಿ ನಮ್ಮ ಸರ್ಕಾರ ಎಷ್ಟು ಖರ್ಚು ಮಾಡುತ್ತಿದೆ ಎಂಬುದನ್ನು ಸ್ವಲ್ಪ ನೋಡೋಣ. ಅದನ್ನೆಲ್ಲಾ ನೋಡಿದರೆ ಆಡಂಬರದ ಸೊಬಗಿಗೆ ಸರ್ಕಾರ ಮನಸೋತು ಜನಜೀವನದ ಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಪಟ್ಟಿಲ್ಲವೆಂದು ಬಡ್ಜೆಟ್ಟನ್ನು ಯಾರು ನೋಡಿದರೂ ಸಹ ಹೇಳಬಹುದು. ನಮ್ಮ ದೇಶ ಗ್ರಾಮಾಂತರಗಳನ್ನೊಡಗೂಡಿದ ದೇಶ. ಗ್ರಾಮಾಂತರದಲ್ಲಿರುವವರೆಲ್ಲಾ ಸಾಮಾನ್ಯವಾಗಿ ರೈತರು. ರೈತರೇ ದೇಶದ ಬೆನ್ನುಮೂಳೆ; ಸರ್ಕಾರದ

ಉತ್ಪತ್ತಿಯೆಲ್ಲ ಅವರಿಂದ ಶೇಕಡ 80 ಭಾಗ ಉತ್ಪತ್ತಿ ಬರುತ್ತದೆ. ಅವರಿಗೆ ಅದಕ್ಕೆ ತಕ್ಕಂತೆ ಪ್ರಯೋಜನ ದೊರೆಯುತ್ತಿದೆಯೇ ಎಂಬುದನ್ನು ಪರಿಶೀಲನೆ ಮಾಡಿದರೆ ಇಲ್ಲ ಎಂದು ಗೊತ್ತಾಗುತ್ತದೆ. ಆದ್ದರಿಂದ ಇನ್ನು ಮುಂದೆ ಸರ್ಕಾರದವರು ಬಡ್ಜೆಟ್‌ನ್ನು ತಯಾರುಮಾಡುವಾಗಲಾದರೂ ಉತ್ತಮ ನೀತಿಯನ್ನು ಅನುಸರಿಸಬೇಕು ಎಂದು ನಾನು ಒತ್ತಿ ಹೇಳುತ್ತೇನೆ. ವಿದ್ಯಾ ಇಲಾಖೆಯಲ್ಲಿ ಕಟ್ಟಡಗಳಿಗೆ ಕೊಟ್ಟಿರತಕ್ಕಂಥ ಅಂದಾಜು ಪಟ್ಟಿಯನ್ನು ನೋಡಿದರೆ ಮೈಸೂರು ಮತ್ತು ಬೆಂಗಳೂರು ಇಂತಹ ಸಿಟಿಗಳಲ್ಲಿ ಮಿಡಲ್ ಸ್ಕೂಲುಗಳಿಗೆ, ಹೈಸ್ಕೂಲುಗಳಿಗೆ ಕಟ್ಟಡ ಕಟ್ಟಿಸುವುದಕ್ಕೆ ಬಹಳ ಆಸಕ್ತಿ ವಹಿಸಿರುವುದು ಕಂಡು ಬರುತ್ತದೆ. ಆದರೆ ಗ್ರಾಮಾಂತರದಲ್ಲಿ estimate ಮಾಡಬೇಕಾದರೆ estimate ಆಗಿದೆಯೇ ಇಲ್ಲವೇ ಎಂಬುದನ್ನು ಕಂಡು ಹಿಡಿಯುವುದು ಕಷ್ಟ. ಒಂದು ಕಡೆ District Boardಗೆ ಹೋಗಬೇಕು. ಮತ್ತೊಂದು ಕಡೆ ವಿದ್ಯಾ ಇಲಾಖೆಗೆ ಹೋಗಬೇಕು——ನಮ್ಮ quota ಇಷ್ಟು ನಿಮ್ಮದು ಏನು ಕೊಡುತ್ತೀರಿ ಎಂದು ವ್ಯಾಪಾರ ಬೇರೆ. ಗ್ರಾಮಾಂತರದಲ್ಲಿ ಸ್ಕೂಲು ಕಟ್ಟಿಸಬೇಕಾದರೆ ಈ ರೀತಿ ವ್ಯಾಪಾರದ ಮಾತುಗಳು. ಇದಲ್ಲದೆ ಗ್ರಾಮಾಂತರ ಜನಜೀವನವನ್ನು ಹೆಚ್ಚಿಸುತ್ತಾರೆಂಬ ಆಡಂಬರದ ಮಾತುಗಳು ಬೇರೆ. ಇದು ಶೋಚನೀಯವಾದ ವಿಷಯ. ಇದನ್ನು ಎಲ್ಲರೂ ಕೂಲಂಕಷವಾಗಿ ಯೋಚಿಸಬೇಕು. ನಾವು ನೀವು ಅಧಿಕ ಸಂಖ್ಯೆಯಲ್ಲಿ ಗ್ರಾಮಾಂತರದಿಂದ ಬಂದಿರತಕ್ಕಂಥ ರೈತರ ಪ್ರತಿನಿಧಿಗಳು ಇದನ್ನು ಗಮನಿಸಬೇಕಾಗಿದೆ. ಪಟ್ಟಣಗಳಿಗೆ ಸೌಕರ್ಯಗಳನ್ನು ಒದಗಿಸಬಾರದೆಂಬುದು ನಮ್ಮ ಉದ್ದೇಶವಲ್ಲ. ಯಾವ ಪರಿಮಿತಿಯಲ್ಲಿ ಪಟ್ಟಣಗಳಿಗೆ ಕೊಡುತ್ತಿದ್ದೀರಿ ಎಂಬುದು ಮಾತ್ರ ಹೇಳುತ್ತಿದ್ದೇನೆ. ಹೊಸ ಇಲಾಖೆಗಳನ್ನು ಪ್ರಾರಂಭಿಸುವುದರ ಜೊತೆಗೆ ಇಲಾಖೆಗಳಲ್ಲಿರತಕ್ಕಂಥ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ Audit Report ಮುಖಾಂತರ ತಂದರೂ ಸಹ, ಜಾರಿಗೆ ತರತಕ್ಕಂಥ ಪದ್ಧತಿಯನ್ನು ಇಲಾಖೆಯವರು ಅನುಸರಿಸುತ್ತಾ ಇಲ್ಲ. ಇದು ದೇಶದ ಆರ್ಥಿಕ ಸ್ಥಿತಿ ಕೆಡುವುದಕ್ಕೆ ಮೊಟ್ಟ ಮೊದಲನೆಯ ಹಂತ ಎಂದು ಎನ್ನಿಸುತ್ತದೆ. ಆದ್ದರಿಂದ ಇನ್ನು ಮೇಲಾದರೂ ಸರ್ಕಾರ ಇಲಾಖೆಯವರಿಗೆ ಆಡಿಟ್ ರಿಪೋರ್ಟ್‌ನಲ್ಲಿ ಸೂಚಿಸಿರುವ ಇಲಾಖಾ ಲೋಪದೋಷಗಳ ತಿಳುವಳಿಕೆ ಕೊಡಬೇಕು ಕೆಲವು ಸಂದರ್ಭಗಳಲ್ಲಿ ಸರ್ಕಾರದವರು Irregularities waive ಮಾಡಿರತಕ್ಕಂಥಾದ್ದು loan waive ಮಾಡಿರತಕ್ಕಂಥಾದ್ದು ಆಡಿಟ್ ರಿಪೋರ್ಟಿನಲ್ಲಿ ತಿಳಿದುಬಂದಿದೆ. ಇತ್ತೀಚೆಗೆ ಆ ರೀತಿಯಾಗಿ ಎಷ್ಟು waive ಮಾಡಿದರೋ ಗೊತ್ತಿಲ್ಲ. ಹಿಂದಿನ ರಿಪೋರ್ಟಿನ ಆಧಾರದ ಮೇಲೆ ಈಗಲೂ ಅದೇ ಪದ್ಧತಿ ನಡೆದುಕೊಂಡು ಬಂದಿದೆಯೋ ಏನೋ ಎಂದು ಭಯದಿಂದ ಹೇಳಬೇಕಾಗಿದೆ. ಈ ಖೋತಾ Budget ಆಗಲು ಮೇಲೆ ಹೇಳಿದ ಕಾರಣಗಳ ಜೊತೆಗೆ ಕೆಲವು ಮುಖ್ಯ ಕಾರಣಗಳಿವೆ. ಸರ್ಕಾರದವರು ಸರಿಯಾದ ವಿವೇಚನೆ ಇಲ್ಲದೆ ಖರ್ಚನ್ನು ಮಾಡತಕ್ಕ ವಿಧಾನ, ಇಲಾಖೆಯವರು ಲೆಖ್ಖ ಪತ್ರಗಳನ್ನು ಸರಿಯಾದ ರೀತಿಯಲ್ಲಿ ಇಡದೆ ಇರುವುದು ಮುಖ್ಯ ಕಾರಣ. ಅದನ್ನು 1950-51-52 Audit ರಿಪೋರ್ಟಿನಲ್ಲಿಯೂ ಸಹ ಒತ್ತಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದಾರೆ.

ಇನ್ನು ಕೈಗಾರಿಕೆಯ ವಿಷಯದಲ್ಲಿ ಹೇಳುವುದಾದರೆ ನಾವು ಸಾಲ ತೆಗೆದುಕೊಂಡು ಎಲ್ಲಿ ಹಾಕಿದ್ದೇವೆ? ಅದರಿಂದ ಬರತಕ್ಕ ಉತ್ಪತ್ತಿ ಏನು? ಬಡ್ಡಿ ಏನು ಬರುತ್ತದೆ? ನಮಗೆ ಫಾಯಿದೆ ಏನು ಬರುತ್ತದೆ? ಇವುಗಳನ್ನು ನಮೂದು ಮಾಡಿಲ್ಲ. ಇತ್ತೀಚೆಗೆ Audit reportನಲ್ಲಿ ಇದನ್ನು ಸೇರಿಸಿದ್ದಾರೆ ಎಂಬುದನ್ನು ಒಪ್ಪುತ್ತೇನೆ. ಇವೊತ್ತಿನ ದಿನ ಸರ್ಕಾರದವರೇ ಕೈಗೊಂಡಿರುವ ಕೈಗಾರಿಕೆಗಳು ಕೆಲವು ಇವೆ. ಖಾಸಗೀಯವರು ಕೈಗೊಂಡಿರತಕ್ಕ ಕೈಗಾರಿಕೆಗಳು ಕೆಲವು ಇವೆ. ಅವುಗಳಲ್ಲಿ ನಮ್ಮ ಸರ್ಕಾರದ shares ಇವೆ. ಸಾಲವನ್ನೂ ಸಹ ಕೊಟ್ಟಿದ್ದಾರೆ. ಸಾಲವನ್ನು waive ಮಾಡತಕ್ಕಂಥ ಪದ್ಧತಿ ಸರ್ಕಾರದಲ್ಲಿ ಇದೆ. ಅದನ್ನು ಆದಷ್ಟು ತೊಡೆದು ಹಾಕಬೇಕು. ಇಷ್ಟು ವರ್ಷಗಳಾದರೂ ಈ ಕೆಲವು ಕೈಗಾರಿಕೆಗಳಲ್ಲಿ bonus ಕೊಡುತ್ತಾ ಇಲ್ಲ. ಬಡ್ಡಿಯೂ ಇಲ್ಲ. ಹಾಗೆಯೇ ನಮ್ಮ ಹಣ ಅಲ್ಲಿ ಬಿದ್ದಿದೆ. ಇದನ್ನೂ ಸಹ ನೀವು ನೋಡಬೇಕು. ಕೆಲವು ಸಿಲ್ಕ್ ಫಿಲೇಚರುಗಳಿವೆ. ಅಲ್ಲಿ ನಮ್ಮ ದುಡ್ಡು ಕೊಟ್ಟು ಎಷ್ಟೋ ದಿವಸಗಳಾದುವು. ಅದರಲ್ಲಿ ನಮ್ಮ ಷೇರುಗಳಿವೆ. ಸರ್ಕಾರದ ಪ್ರತಿನಿಧಿಯೂ ಇದ್ದಾರೆ. ಅವರು ಏನು ಕೆಲಸಮಾಡುತ್ತಿದ್ದಾರೆ? ಈ ರೀತಿಯಾಗಿ ಒಟ್ಟಿನಲ್ಲಿ ಸರ್ಕಾರ ಅಂತಹ ಖಾಸಗೀ ಸಂಸ್ಥೆಗಳನ್ನು ಜಾಗ್ರತೆ ತೆಗೆದುಕೊಂಡೇ ನಡೆಸಬೇಕು. ಇಲ್ಲದಿದ್ದರೆ ನಾವು ಹಾಕಿರತಕ್ಕ ದುಡ್ಡಿಗೆ ಇನ್ನು ಒಂದೆರಡು ವರ್ಷಗಳಲ್ಲಿ ಲೋಪ ಬರಬಹುದೆಂದು ಹೇಳುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸರಕಾರದವರು 1955-56ನೇ ಇಸವಿಯಲ್ಲಿ ಇಟ್ಟಿರತಕ್ಕಂಥ ಆಯವ್ಯಯದ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆ. ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಸುಮಾರು 4,46,00,000 ರೂಪಾಯಿಗಳನ್ನು ವಿನಿಯೋಗಿಸಿದ್ದಾರೆ. ದೇಶದ ಪ್ರಜೆಗಳ ಅಂತಸ್ತನ್ನು ಉತ್ತಮ ಮಾಡತಕ್ಕಂಥ ವಿದ್ಯಾಭ್ಯಾಸಕ್ಕೆ ಹೀಗೆ ನಮ್ಮ ಸರಕಾರದವರು ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ. ಹಳ್ಳಿಗಳಲ್ಲಿ ಸ್ಕೂಲುಗಳು ಬೇಕು ಎಂದು ಕೇಳಿದರೆ ಹಳ್ಳಿಯವರೇ ಸ್ಕೂಲು ಕಟ್ಟಡ ಕಟ್ಟಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಆದರೆ ಬೆಂಗಳೂರು, ಮೈಸೂರಿನಲ್ಲಿ ಸ್ಕೂಲುಬೇಕಾದರೆ ಕಟ್ಟಡಗಳನ್ನು ಬಹು ಬೇಗನೇ ಕಟ್ಟಿಸಿಕೊಡುತ್ತಾರೆ ಇಲ್ಲವೇ ಅನೇಕ ಬಾಡಿಗೆ ಮನೆಗಳನ್ನೂ ಸಹ ಸರ್ಕಾರದವರು ತೆಗೆದುಕೊಂಡು ಅಲ್ಲಿ ಸ್ಕೂಲುಗಳನ್ನು ನಡೆಸುತ್ತಾರೆ. ಹಳ್ಳಿಗಳಲ್ಲಿ ರೈತರಿಗೆ ಸ್ಕೂಲ್ ಕಟ್ಟಡ ಕಟ್ಟಿಸುವುದಕ್ಕೆ ಗತಿ ಇರುವುದಿಲ್ಲ. ನಮ್ಮ ಡಿಸ್ಟ್ರಿಕ್ಟಿನಲ್ಲಿ ಎಷ್ಟೋ ಸ್ಕೂಲುಗಳು ಬೇಕೆಂದು ಕೇಳಿದ್ದೇನೆ. ಆದರೆ ಸರ್ಕಾರದವರು ಕಟ್ಟಡ ಕೊಡಿಸಿದರೆ ಸ್ಕೂಲುಗಳನ್ನು ಕೊಡಲು ಏರ್ಪಾಡು ಮಾಡುತ್ತೇವೆಂದು ಹೇಳುತ್ತಾರೆ. ಕಟ್ಟಡ ಕೊಡುವವರೆಗೆ ಸ್ಕೂಲುಗಳನ್ನು ಕೊಡುವಹಾಗಿಲ್ಲವೆಂದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂತ ಸರ್ಕಾರದ ದೃಷ್ಟಿ ಹಳ್ಳಿಗಳ ಕಡೆಯೂ ಇರಬೇಕು ಎಂದು ಹೇಳುತ್ತೇನೆ.

ಇನ್ನು ಸ್ಕಾಲರ್‌ಷಿಪ್ ವಿಷಯ ಹೇಳುವುದಾದರೆ Intermediate Collegeಗಳಲ್ಲಿ ಕ್ರಿಶ್ಚಿಯನ್ನರಿಗೆ, ಮುಸಲ್ಮಾನರಿಗೆ, ಹಿಂದುಳಿದ ಕೋಮಿನವರಿಗೆ ಎಂಬುದಾಗಿ ಸ್ಕಾಲರ್‌ಷಿಪ್ Allot ಮಾಡಿಲ್ಲ ಹೆಣ್ಣುಮಕ್ಕಳ ಹೈಸ್ಕೂಲಿನಲ್ಲಿ ಕೇವಲ ಕಮ್ಮಿ Allot ಮಾಡಿದ್ದಾರೆ. Scholarship ಕಮಿಟಿ ಮೆಂಬರ್ ಆಗಿದ್ದು ನಾನು ಸಮಾಧಾನ ಹೇಳುವುದಕ್ಕೆ ಪ್ರಾಣಸಂಕಟವಾಗುತ್ತದೆ ಮತ್ತು ಕಷ್ಟವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಸರಕಾರದವರಿಗೆ ತಿಳಿಸುತ್ತಿದ್ದೇನೆ. ಸರ್ಕಾರದವರು scholarship allot ಮಾಡುವಾಗ ಬಹಳ ಯೋಚನೆಮಾಡಿ ಎಲ್ಲಾ ಜನಾಂಗದವರಿಗೂ ಅನುಕೂಲವಾಗುವಂತೆ ಮಾಡಿಕೊಡಬೇಕು.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

Inermediate Collegeನಲ್ಲಿ ಮುಸ್ಲಿಮ್ scholarship ಇಲ್ಲದೆ ನಾಲ್ಕು ಜನ ಫೀಸ್ ಕಟ್ಟುವುದಕ್ಕೆ ಶಕ್ತಿ ಇಲ್ಲದೆ ಬಿಟ್ಟುಹೋದರು. ಇಂತಹ ಬಡ ವಿದ್ಯಾರ್ಥಿಗಳ ವಿಚಾರದಲ್ಲಿ ಸರಕಾರದವರು ಹೆಚ್ಚು ಸಹಾಯ ಮಾಡಬೇಕು. ಸರಕಾರದವರು ಬಡವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ವಯಸ್ಕರ ಶಿಕ್ಷಣ ಮಾಡಿದ್ದಾರೆ. ವಯಸ್ಕರ ಶಿಕ್ಷಣದಿಂದ ಅನುಕೂಲವಾಗುತ್ತದೆಂದು ಕಾಣುವುದಿಲ್ಲ. ವಯಸ್ಕರ ಶಿಕ್ಷಣ ಸಮಿತಿಗೆ ಕೊಟ್ಟ ಹಣದಿಂದ ಡಿಸ್ಟ್ರಿಕ್ಟುಗಳಲ್ಲಿ ಅವರ ಕಚೇರಿಗಳನ್ನು ನಡೆಸುವುದು ಟೋಕನ್ಸ್ ಮಾರುವುದು ಮಾಡಲು ಸಹಾಯವಾಯಿತೇ ವಿನಾ ಅದರಿಂದ ಜನಗಳಿಗೆ ಏನು ಅನುಕೂಲವಾಗಿದೆ ಎಂಬುದು ಗೊತ್ತಾಗುತ್ತಾ ಇಲ್ಲ. ಸರ್ಕಾರದವರು ಒಳ್ಳೆಯ ಉದ್ದೇಶದಿಂದ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದಾರೆ. ಆದರೆ ಸರಿಯಾದಂಥ ಹಾಗೆ ಸುಸಂಸ್ಕೃತ ರೀತಿಯಲ್ಲಿ ಪ್ರಚಾರ ಮಾಡಿದರೆ ಜನರು ಮನ್ನಣೆ ಕೊಟ್ಟಾರು. Revenue Inspectors, Amildars, Deputy Commissioners ತಮ್ಮ ಕೆಲಸಗಳನ್ನು ಬಿಟ್ಟು ಆ ಕೆಲಸ ನಡೆಸಬೇಕಾಗಿವೆ. ಇಂತಹ ಕೆಲಸವನ್ನು ಕರ್ಣಾಟಕ ಸಂಘದವರಿಗೋ, ವಯಸ್ಕರ ಶಿಕ್ಷಣದವರಿಗೋ, ಖಾಸಗೀ ಸಂಸ್ಥೆಗಳಿಗೋ ಕೊಡುವುದು ಒಳ್ಳೆಯದು. ಸಂಸ್ಕೃತಿ ಪ್ರಚಾರಕ್ಕೆ ಯೋಗ್ಯರಾದಂಥ ವಿದ್ಯಾವಂತರನ್ನು ನೇಮಿಸುವುದು ಒಳ್ಳೆಯದು. ಈಗಿನ ರೀತಿಯಲ್ಲಿ ಮಾಡುವುದನ್ನು ನೋಡಿದರೆ, ಸಂಸ್ಕೃತಿ ಮಟ್ಟ ಕೀಳು ಮಟ್ಟಕ್ಕೆ ಬರುತ್ತದೆ ಎಂದು ಹೇಳಬೇಕಾಗಿದೆ. ನಮ್ಮ ದೇಶದ ಸಂಸ್ಕೃತಿ ಎಷ್ಟು ಉತ್ತಮವಾದುದು! ನಮ್ಮ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿರ ತಕ್ಕಂಥ ಸಂಸ್ಕೃತ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಈಗಿನ ಬಡ್ಜೆಟ್ಟಿನಲ್ಲಿ ಸರಕಾರದವರು General hostelಗಳನ್ನು ಕಟ್ಟಿಸುವುದಕ್ಕೆ ಏರ್ಪಾಡು ಮಾಡಿದ್ದಾರೆ. ಅದು ಸಂತೋಷದ ವಿಷಯ. ನಮ್ಮ ದೇಶದಲ್ಲಿ ಜಾತಿ, ಕೋಮುವಾರು ಭಾವನೆಗಳು ಹುಟ್ಟಿ ಅದರಿಂದ ದೇಶದ ಪ್ರಗತಿಗೆ ಧಕ್ಕೆ ಬರುತ್ತಿದೆ. ಆದ್ದರಿಂದ ದೇಶದಲ್ಲಿ ಒಗ್ಗಟ್ಟಾಗಿರಬೇಕಾದ ಇಂಥ ಕಾಲದಲ್ಲಿ general hostelಗಳನ್ನು ಮಾಡುವುದು ಬಹಳ ಸಂತೋಷ. ಅಂತಹ general hostelಗಳು ನಮ್ಮಲ್ಲಿ ಬಹಳ ದಿವಸಗಳಿಂದಲೂ ಇವೆ. ಈಗ ಕೋಮುವಾರು ಹಾಸ್ಟಲುಗಳಿಗೆ ಶೇಕಡ 25ನ್ನಾದರೂ ಬೇರೆ ವಿದ್ಯಾರ್ಥಿಗಳನ್ನು ಸೇರಿಸುವುದು ಒಳ್ಳೆಯದು. ಈಗ ಮುಸಲ್ಮಾನರಿಗೆ ಬೇರೆ ಉರ್ದು ಸ್ಕೂಲ್ ಮಾಡುತ್ತಾರೆ. ಇದರಿಂದ ಹುಡುಗರಲ್ಲಿ ಪ್ರತ್ಯೇಕ ಮನೋಭಾವ ಬೆಳೆದುಬರುತ್ತದೆ. ಈ ಪ್ರತ್ಯೇಕ ಮನೋಭಾವ ಹೋಗಬೇಕಾದ್ದರೆ ಎಲ್ಲಾ ಕೋಮಿನವರೂ ಒಂದೇ ಕಡೆ ಸೇರಿ ವಿದ್ಯಾರ್ಜನೆ ಮಾಡಿಕೊಂಡುಬಂದರೆ ಆಗ ಐಕಮತ್ಯ ಬೆಳೆಯಲು ಸಹಾಯಕವಾಗುತ್ತದೆ. ಇಲ್ಲದಿದ್ದರೆ ಇವರು ಬೇರೆ ಜಾತಿ, ಅವರ ಜಾತಿ ಬೇರೆ ಎಂಬ ಪ್ರತ್ಯೇಕ ಭಾವನೆ ಬೆಳೆಯುತ್ತಾ ಹೋದರೆ ದೇಶಕ್ಕೆ ಅದರಿಂದ ಕುಂದಕವಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀಮಾನ್ ಎಚ್. ಕೆ. ಶಿವರುದ್ರಯ್ಯನವರು ಭಾಷಣ ಮಾಡುತ್ತಾ, ಮಲೆನಾಡಿನ ಸ್ಥಿತಿ ಎಷ್ಟು ಕಠಿಣವೆಂಬುದನ್ನು ಚಿತ್ರಿಸಿದ್ದಾರೆ. ಅದನ್ನು ಉತ್ಪ್ರೇಕ್ಷೆಯೆಂದು ಹೇಳುವುದಿಲ್ಲ. ಸರ್ಕಾರದವರೇನೋ ಈಗ ಕೆಲವು ಸೇತುವೆ, ರಸ್ತೆಗಳನ್ನು ಮಾಡಿಸಿದ್ದಾರೆ; ಅದಕ್ಕಾಗಿ ನನ್ನ ಅಭಿನಂದನೆಗಳು. ಆದರೆ, ಚಿಕ್ಕಮಗಳೂರು—ಮಂಗಳೂರು ರಸ್ತೆ ಹೇಗಿದೆಯೆಂಬುದನ್ನು ಅವರು ನೋಡಿಲ್ಲವೆಂದು ಕಾಣುತ್ತದೆ. ನಾವು ಎಷ್ಟೋಸಾರಿ ಕೇಳಿದರೂ ಇನ್ನೂ ಸರಿಮಾಡಿಸಿಲ್ಲ. ಕಡೂರಿನಿಂದ ಮಂಗಳೂರಿಗೆ ಒಂದು ಬಸ್ ಹಾಕಬೇಕೆಂದು ಕೇಳುತ್ತಿದ್ದೇವೆ. ಅದೇನಾದರೂ ಆದರೆ ಈ ರಸ್ತೆಯನ್ನು ಉತ್ತಮಪಡಿಸಬಹುದೆಂದು ಕಾಣುತ್ತದೆ. ಇದನ್ನು ಖಂಡಿತ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇಂಡಿಯಾ ಸರ್ಕಾರದವರು ಈಚೆಗೆ ಸೋಷಿಯಲ್ ವೆಲ್‌ಫೇರ್ ಬೋರ್ಡ್ ಎಂದು ಹೇಳಿ ಅನಾಥರಾದ ಹೆಣ್ಣುಮಕ್ಕಳ ಯೋಗಕ್ಷೇಮ ಸಾಧನೆಗಾಗಿ ಏರ್ಪಾಡು ಮಾಡಿದ್ದಾರೆ. ಇದು ಚೆನ್ನಾಗಿ ಕೆಲಸ ಮಾಡುತ್ತಿದೆಯೆಂದು ಕೇಳಿದ್ದೇನೆ. ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ಯಾವ ಯಾವ ಹಳ್ಳಿಗಳಿಗೆ ಹೋಗಿ ಏನೇನು ಕೆಲಸ ಮಾಡಿದ್ದಾರೆಂಬುದರ ಬಗ್ಗೆ ಒಂದು ರಿಪೋರ್ಟ್ ಕೊಟ್ಟರೆ ಒಳ್ಳೆಯದು.

ವ್ಯವಸಾಯ ಖಾತೆಯ ವಿಚಾರದಲ್ಲಿ ಒಂದು ಮಾತು. ಬೀರೂರಿನಲ್ಲಿ ಮಲ್ಲಪ್ಪನವರ ಮನೆ ಹತ್ತಿರ ಒಂದು ಟ್ರಾಕ್ಟರು ಕೆಟ್ಟು ಎರಡು ವರ್ಷದಿಂದ ಅಲ್ಲೇ ನಿಂತಿದೆ. ಅದನ್ನು ಸರಿಮಾಡಲಿಕ್ಕೆ ಸ್ಪೇರ್ ಪಾರ್ಟ್‌ಗಳಿಲ್ಲದೆಯೋ ಏನೋ ಇದುವರೆಗೂ ರಿಪೇರಿಯಾಗಿಲ್ಲ. ಸರ್ಕಾರದ ದುಡ್ಡು ಈ ರೀತಿಯಾಗಿ ಅನ್ಯಾಯವಾಗಿ ದಂಡವಾಗುತ್ತಿದೆ. ಹೀಗೆ ಟ್ರಾಕ್ಟರುಗಳನ್ನು ಇಟ್ಟುಕೊಂಡು ರಿಪೇರಿ ಮಾಡದೆ ವರ್ಷಗಟ್ಟಲೆ ಬಿಟ್ಟಿರುವುದರ ಬದಲು ಮಾರಾಟವಾದರೂ ಮಾಡಲಿ; ಏಕೆ ಸುಮ್ಮನೆ ಇಟ್ಟುಕೊಂಡಿರಬೇಕು? ಈ ಕಡೆ ಡ್ರೈವರುಗಳಿಗೂ ವೃಥಾ ಸಂಬಳ ಕೊಟ್ಟುಕೊಂಡು, ಸರ್ಕಾರದವರು ತಮ್ಮ ದುಡ್ಡಿನಿಂದ ಉಪಯೋಗವನ್ನೂ ಪಡೆಯದಿರುವುದು ಸರಿಯಲ್ಲ.

ಕೈಗಾರಿಕೆಗಳ ವಿಷಯವಾಗಿ ಆಗಲೇ ಹೇಳಿದ್ದೇನೆ. ಸರ್ಕಾರದವರು ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕೆಂದಿರುವುದಾಗಿ ಹೇಳುತ್ತಲೇ ಇದ್ದಾರೆ. ಹೀಗಿರುವಾಗ, ಚಿಕ್ಕಮಗಳೂರಿನಲ್ಲಿ ಒಂದು Industrial Schoolನ್ನು ಕಟ್ಟಿಸಿಕೊಡಬೇಕೆಂದು ಮೂರು ವರ್ಷಗಳಿಂದ ಹೇಳುತ್ತಿದ್ದೇವೆ 100 ರೂಪಾಯಿಗಳ ಬಾಡಿಗೆಯನ್ನು ಮೂವತ್ತು ವರ್ಷಗಳಿಂದ ಕೊಟ್ಟುಕೊಂಡು ಬರುತ್ತಾ ಬಾಡಿಗೆ ಕಟ್ಟಡದಲ್ಲಿ ಸರ್ಕಾರದವರು ಸ್ಕೂಲನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀಮಾನ್ ಹನುಮಂತಪ್ಪನೆಂಬವರು ಸಾಹುಕಾರರು ಒಂದು ಕಟ್ಟಡವನ್ನು ಕೊಟ್ಟಿದ್ದಾಗ್ಯೂ ಅದರಲ್ಲೇ ಏನಾದರೂ ಸೂಕ್ತ ಬದಲಾವಣೆಗಳನ್ನು ಮಾಡಿ ಆ ಕಟ್ಟಡವನ್ನು ಸ್ಕೂಲು ನಡೆಸುವುದಕ್ಕೆ ಸರಿಮಾಡಿಕೊಡಬೇಕೆಂದು ಕೇಳುತ್ತಿದ್ದರೂ ಇನ್ನೂ ಮಾಡಿಲ್ಲ. ಈ ಸಾರಿಯಾದರೂ ಇದಕ್ಕೆ ಗಮನಕೊಡುತ್ತಾರೆಂದು ನಂಬಿದ್ದೇನೆ.

ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ದುಡ್ಡು ಬೇಕೆಂದು ಹೇಳಿದ್ದಾರೆ. ಇದು ನಿಜವಾದ ಮಾತು. ಇದಕ್ಕಾಗಿ ಪ್ಲಾಂಟೇಷನ್ಗಳ ಮೇಲೆ income-tax ಹಾಕಬೇಕೆಂದು ಹೇಳಿದ್ದಾರೆ. ಸರ್ಕಾರದವರು ತಮ್ಮ ಬೇರೆ ಉದ್ಯಮಗಳಿಗೆ ದುಡ್ಡು ಅವಶ್ಯಕವಾದರೆ ದೇಶದ ಬೆನ್ನುಮೂಳೆಯಾದ ರೈತನಿಂದ ಪಡೆಯುವುದಕ್ಕೆ ಯತ್ನಿಸುವುದು ಸರಿಯಲ್ಲ. ಇದರಿಂದ 20 ಲಕ್ಷ ರೂಪಾಯಿಗಳು ಬರುತ್ತದೆಂದು ಹೇಳಿ, ರೈತರ ಕುತ್ತಿಗೆಗೆ ಹೀಗೆ ಹಗ್ಗ ಹಾಕುವುದು ಸರಿಯಲ್ಲ. ಈಗಲೂ ನಮ್ಮ ಕಡೆಯಲ್ಲಿ ಕಾಫಿ ತೋಟಗಳವರ ಸ್ಥಿತಿ ಚಿಂತಾಜನಕವಾಗಿದೆ. 1940ನೆಯ ಇಸವಿಯಲ್ಲಿದ್ದ ಕಾಫಿ ತೋಟದ ವಿಸ್ತೀರ್ಣಕ್ಕೂ ಈಗಿರುವುದಕ್ಕೂ ಹೋಲಿಕೆ ಮಾಡಿ ನೋಡಿದರೆ ಬಹಳಮಟ್ಟಿಗೆ ಕಡಮೆಯಾಗುತ್ತಿರುವುದನ್ನು ಕಾಣಬಹುದು. 1940ರಲ್ಲಿ 90,000

ಎಕರೆಗಳಿದ್ದುದು ಈಗ ಬಹಳಮಟ್ಟಿಗೆ ಕಡಮೆ ಬಿದ್ದು ಹೋಗಿದೆ. ಈ ತೆರಿಗೆಯ ವಿಚಾರವನ್ನು ಕೇಳಿದ ಮೇಲಂತೂ ಪ್ಲಾಂಟೇಷನ್‌ಗಳವರು ಹೆದರಿ ಹೋಗಿದ್ದಾರೆ. ಲೇಬರ್ ರೂಲ್ಸ್‌ಗಳ ನಿಯಮಗಳಿಗೆ ಬೇರೆ ಒಳಪಟ್ಟು ಒದ್ದಾಡುತ್ತಿದ್ದಾರೆ. ಜೊತೆಗೆ ಎಕ್ಸೈಸ್ ಡ್ಯೂಟಿ, ಸೇಲ್ಸ್ ಟ್ಯಾಕ್ಸ್ ಮುಂತಾದುವುಗಳನ್ನು ಕೊಡಬೇಕಾಗಿ ಬಂದು ಅನೇಕ ಪ್ಲಾಂಟರುಗಳು ತಮ್ಮ ತೋಟಗಳನ್ನು ಈಗಾಗಲೆ ಮಾರ್ವಾಡಿಗಳಲ್ಲಿ ಅಡವಿಟ್ಟು ಕಷ್ಟ ದೆಶೆಯಲ್ಲಿದ್ದಾರೆ. ಅವರ ಜೀವನ ನಿಜವಾಗಿಯೂ ಕಷ್ಟವಾಗಿದೆ. ರೈತರ ಕಷ್ಟ ಸುಖಗಳನ್ನು ತಿಳಿದಂಥ ಸರ್ಕಾರದವರು ರೈತರಿಗೆ ಕಷ್ಟ ಕೊಟ್ಟಿರುವುದು ಬಹಳ ಅನ್ಯಾಯ. ಆದ್ದರಿಂದ ಸರ್ಕಾರದವರು ಇನ್ಯಾವ ರೀತಿಯಲ್ಲಾದರೂ ತಮ್ಮ ಖೋತಾವನ್ನು ಸರಿಪಡಿಸಿಕೊಳ್ಳಲಿ. ರೈತರ ಮೇಲೆ ಮಾತ್ರ ಸರ್ಕಾರದ ಗದೆಯನ್ನು ಹೇರಕೂಡದು. ಪ್ಲಾಂಟೇಷನ್ನಿನವರೂ ರೈತವರ್ಗದಲ್ಲಿಯೇ ಸೇರಿದವರಾಗಿದ್ದಾರೆ ಎಂದು ಹೇಳಿ ನಾನು ಈ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಅಧ್ಯಕ್ಷರೆ, 1955-56 ನೆಯ ಇಸವಿಯ ಆಯವ್ಯಯ ಅಂದಾಜನ್ನು ಯಾವ ಹಿನ್ನೆಲೆಯನ್ನಿಟ್ಟುಕೊಂಡು ನಾವು ವಿಮರ್ಶೆ ಮಾಡಬೇಕೆಂಬುದು ಬಹಳ ಮುಖ್ಯವಾದ ವಿಷಯ. ನಮ್ಮ ದೇಶ ಹಳ್ಳಿಗಳಿಂದ ತುಂಬಿರತಕ್ಕ ದೇಶ. ಶೇಕಡ ಎಪ್ಪತ್ತೈದರಷ್ಟು ಜನ ಹಳ್ಳಿಗಾಡಿನಲ್ಲಿದ್ದಾರೆ. ಅವರ ಸ್ಥಿತಿ ಅವಿದ್ಯೆ, ಅನಾರೋಗ್ಯಗಳಿಂದ ಕೂಡಿ, ಅವರು ಬಡತನದಿಂದ ನರಳುತ್ತಿರುವ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಅವರಿಗೆ ಬೇಕಾದ ಸೌಲಭ್ಯಗಳನ್ನು ಕೊಡದೆ ಹೋದರೆ ದೇಶದ ಪ್ರಗತಿ ಸಾಧನೆಯಾಗುವುದಿಲ್ಲವೆಂಬುದು ಖಂಡಿತ. ಇದಕ್ಕೆ ಮುಖ್ಯವಾಗಿ ಈಗ ಆಗಬೇಕಾದದ್ದು ನಿರಾವರೀ ಕಾಮಗಾರಿಗಳು ಮತ್ತು ಗೃಹಕೈಗಾರಿಕೆಗಳು. ಇಂಥ ಒಂದು ಸಾಧನ ಸಂಪತ್ತನ್ನು ಅವರಿಗೆ ಒದಗಿಸಿದರೆ ಮಾತ್ರವೇ ದೇಶದ ಪ್ರಗತಿಸಾಧನೆಯಾಗುತ್ತದೆಂಬುದನ್ನು ನಾವು ಗಮನಿಸಬೇಕು.

ಈ ಹಿನ್ನೆಲೆಯಲ್ಲಿ ನೋಡುವುದಾದರೆ ಎದುರುಪಕ್ಷದವರ ವಾದವು ಅಷ್ಟು ಪ್ರಾಮುಖ್ಯತೆಗೆ ಬರುವುದಿಲ್ಲ, ಅವರ ಟೀಕೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿಲ್ಲವೆಂದು ಹೇಳಬಹುದು. ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರು ಮಾತನಾಡುತ್ತಾ ನಮ್ಮ ಹಳ್ಳಿಗಾಡಿನ ಜನಜೀವನದ ಮಟ್ಟ ಸ್ವಲ್ಪವೂ ಏರಿಲ್ಲವೆಂದು ಹೇಳಿದರು. ನಾವು ಹತ್ತು ವರ್ಷದ ಹಿಂದಿನ ಪರಿಸ್ಥಿತಿಗೂ, ಈ ಹೊತ್ತಿನ ಹಳ್ಳಿಗಾಡಿನ ಜನರ ಪರಿಸ್ಥಿತಿಗೂ ಹೋಲಿಸಿ ನೋಡಿದರೆ, ಸ್ವಲ್ಪಮಟ್ಟಿಗೆ ಅಲ್ಲಿನ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ನಾವು ಧಾರಾಳವಾಗಿ ಹೇಳಬಹುದು. ಅದು ಈಗಿನ ಕಾಲದಲ್ಲಿ ಅವರು ಬೆಳೆದಂಥ ಧಾನ್ಯಗಳಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟದ್ದರಿಂದ, ಅವರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿಕೊಟ್ಟದ್ದರಿಂದ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಹಳ್ಳಿಗಾಡಿನ ಬಡರೈತನ ಸಂಸಾರವನ್ನು ನೋಡುವುದಾದರೂ ಸಹ, ಹಿಂದೆ ಒಂದು ಜೊತೆ ಎತ್ತನ್ನು ಇಟ್ಟುಕೊಳ್ಳಲಿಕ್ಕೂ ಸಾಧ್ಯವಿಲ್ಲದ ಮನುಷ್ಯ, ತನ್ನ ವ್ಯವಸಾಯಕ್ಕೆ ಒಂದು ಗಾಡಿಯಿಲ್ಲದ ಮನುಷ್ಯ, ಇಂದು ಎತ್ತು, ಗಾಡಿ ಎಲ್ಲವನ್ನೂ ಇಟ್ಟುಕೊಂಡು ತನ್ನ ವ್ಯವಸಾಯವನ್ನು ಉತ್ತಮಸ್ಥಿತಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಈ ಪ್ರಕಾರ, ಅವನ ಜೀವನಮಟ್ಟ ಸ್ವಲ್ಪಮಟ್ಟಿಗೆ ಸುಧಾರಿಸಿದೆಯೆಂದು ನಾವು ನಿಜವಾಗಿಯೂ ಒಪ್ಪಿಕೊಳ್ಳಬೇಕಾಗಿದೆ.

ಹೀಗೆ ರೈತರಿಂದ ಕೂಡಿದ ನಮ್ಮ ಪ್ರದೇಶದ ಜನರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದಾಗ ಬೇಕಾದ ದುಡ್ಡನ್ನು ರಿಸರ್ವ್‌ನಿಂದಲಾದರೂ ಕೊಡಲಿ, ಸಾಲವನ್ನು ಮಾಡಿಯಾದರೂ ಕೊಡಲಿ, ಒಟ್ಟಿನಲ್ಲಿ ಕೊಡಬೇಕಾದ್ದು ಅಗತ್ಯ. ಶ್ರೀಮಾನ್ ಇಮಾಂರವರು ರಿಸರ್ವ್‌ನಿಂದ ಸಾಮಾನ್ಯ ಖರ್ಚಿಗಾಗಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಹಿಂದೆ ಹೇಳುತ್ತಿದ್ದರು. ಈಗ ಸಾಲವನ್ನು ಮಾಡಿ ನಿತ್ಯ ಖರ್ಚಿಗೆ ಉಪಯೋಗಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಯಾವ ರೂಪದಲ್ಲಾದರೂ ಮಾಡಲಿ, ಈ ಸಾಧನ ಸಂಪತ್ತನ್ನು ನಮ್ಮ ರೈತರಿಗೆ ಒದಗಿಸುವುದು ಅಗತ್ಯವೆಂಬುದನ್ನು ನಾವು ತಿಳಿಯಬೇಕು. ಅದನ್ನು ಮಾಡದೆ ಹೋದರೆ, ನಮ್ಮ ದೇಶದ ಸ್ಥಿತಿಗತಿಗಳು ಉತ್ತಮವಾಗುವುದಿಲ್ಲವೆಂಬ ದೃಷ್ಟಿಯಿಂದ ಆಯವ್ಯಯ ಅಂದಾಜನ್ನು ತಯಾರು ಮಾಡಬೇಕೆಂಬುದನ್ನು ಅವರು ಗಮನಿಸಬೇಕು.

ಶ್ರೀಮಾನ್ ಪಂಚಾಕ್ಷರಯ್ಯನವರು ಮಾತನಾಡುತ್ತಾ, ಇದು ಜನ ಸಾಮಾನ್ಯರ ಬಜೆಟ್ಟಲ್ಲ ಎಂದು ಹೇಳಿದರು. ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಕೂಡ ಅದನ್ನೇ ಹೇಳಿದರು. ಮಾನ್ಯ ಸದಸ್ಯರು, ನಮ್ಮ ಆದಾಯದ ಎಷ್ಟು ಭಾಗ ಜನಸಾಮಾನ್ಯರಿಗೆ ಖರ್ಚಾಗುತ್ತಿದೆಯೆಂಬುದನ್ನು ಬಜೆಟ್ ಮೆಮೊರಾಂಡಮ್ಮಿನ 7ನೆಯ ಪುಟದಲ್ಲಿ ನೋಡಿದ್ದರೆ, ಅವರು ಈ ರೀತಿ ಹೇಳುತ್ತಿರಲಿಲ್ಲವೆಂದು ಭಾವಿಸುತ್ತೇನೆ.

ಶ್ರೀಮಾನ್ ಪಂಚಾಕ್ಷರಯ್ಯನವರು ಟ್ರಸ್ಟ್‌ಬೋರ್ಡುಗಳಿಗೆ ಮತ್ತು ಪಟ್ಟಣಗಳಿಗೆ ನೀರನ್ನು ಒದಗಿಸುವುದಕ್ಕೆ ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ, ಹಳ್ಳಿಗಾಡಿನಲ್ಲಿ ಏನೇನೂ ಕೊಡುತ್ತಿಲ್ಲ ಎಂದು ಹೇಳಿದರು. ಟ್ರಸ್ಟ್ ಬೋರ್ಡಿಗೆ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟದ್ದರೂ ಅದೆಲ್ಲಾ ಮುಂಗಡವಾಗಿ ಕೊಟ್ಟಿರುವುದು ಅಷ್ಟೆ. ಪಟ್ಟಣಗಳಿಗೂ ಕೂಡ ಸಾಲವಾಗಿ ಕೊಟ್ಟಿದ್ದಾರೆ ಎಂಬುದನ್ನು ಅವರು ಗಮನಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಹಳ್ಳಿಗಾಡಿನ ಕಡೆ ಆ ಸಾಲವನ್ನೂ ಕೊಟ್ಟಿಲ್ಲ !

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಳ್ಳಿಗಾಡಿನವರಿಗೆ ಸಾಲವನ್ನು ಕೊಟ್ಟರೂ ಅವರು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಸಾಲವನ್ನು ಕೊಟ್ಟು ಹಳ್ಳಿಗಾಡುಗಳಿಗೆ ನೀರನ್ನೊದಗಿಸುವುದಕ್ಕೆ ಬದಲಾಗಿ, ಸರ್ಕಾರದವರಿಗೆ ಎಷ್ಟು ಸಾಧ್ಯವಿದೆಯೋ ಅಷ್ಟು ದುಡ್ಡನ್ನು ಕೊಟ್ಟು ಕುಡಿಯುವ ನೀರನ್ನು ಉಚಿತವಾಗಿ ಒದಗಿಸುವುದು ಒಳ್ಳೆಯದು.

ಈ ದೃಷ್ಟಿಯಿಂದ ನೋಡಿದರೆ, ಮೈಸೂರು ದೇಶದ ಇತಿಹಾಸದಲ್ಲೇ 1954-55 ನೇ ಇಸವಿಯಲ್ಲಿ ಖರ್ಚಾದಷ್ಟು ಯಾವ ವರ್ಷವೂ ಆಗಿಲ್ಲ. ಹತ್ತು ಲಕ್ಷ ರೂಪಾಯಿಗಳು ಖರ್ಚಾಗಿವೆ. 1955-56 ನೆಯ ಇಸವಿಗೆ ಬೇರೆ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲದೆ, ಕಂದಾಯದ ಒಂದು ಭಾಗವನ್ನು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಒದಗಿಸುವ ಮುಖಾಂತರ, ಈ ಹತ್ತು ಲಕ್ಷ ರೂಪಾಯಿಗಳ ಜೊತೆಗೆ ಡಿಸ್ಟ್ರಿಕ್ಟ್ ಬೋರ್ಡಿನ Land Revenue Assignment ಭಾಗ ಮತ್ತು ಕೇಂದ್ರ ಸರ್ಕಾರದ ಯೋಜನಾ ಸಮಿತಿಯಿಂದ ಬರತಕ್ಕ ಹಣ ಅಂದರೆ ಇನ್ನೂ ಸುಮಾರು 5-6 ಲಕ್ಷ ರೂಪಾಯಿಗಳು ಕುಡಿಯುವ ನೀರಿಗಾಗಿ ಸಿಕ್ಕುತ್ತದೆಂದು ಹೇಳಬಹುದು. ಆದರೂ, ಗ್ರಾಮಾಂತರಗಳಿಗೆ ನೀರನ್ನು ಒದಗಿಸುವ ಯೋಜನೆ

(ಶ್ರೀ ಎಚ್. ಹುಚ್ಚಮಾಸ್ತಿಗೌಡ)

ಯನ್ನೂ ಕೈಕೊಂಡು ಎರಡು ವರ್ಷಗಳೊಳಗೆ ಎಂದರೆ ಮುಂದಿನ ಮಹಾಚುನಾವಣೆಗೆ ಹೋಗುವುದರೊಳಗೆ ಪ್ರತಿಯೊಂದು ಗ್ರಾಮಕ್ಕೂ ನೀರಿನ ಬಾವಿಗಳನ್ನು ಕೊಡುವಂತೆ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. 1952 ನೆಯ ಇಸವಿಯ ಚುನಾವಣೆಗಳಲ್ಲೂ ಕೂಡ ಸರ್ಕಾರ ಹಿಂದಿನ ಐದು ವರ್ಷಗಳಲ್ಲಿ 1947 ನೆಯ ಇಸವಿಯಿಂದ 1952 ರ ವರೆಗೆ ಏನೇನು ಸೌಲಭ್ಯಗಳನ್ನು ಜನರಿಗೆ ಒದಗಿಸಿತು ಎಂಬ ಅಂಕಿ ಅಂಶಗಳನ್ನು ಇಟ್ಟಿದ್ದರಿಂದಲೇ ಬಹುಮತದಿಂದ ಕಾಂಗ್ರೆಸ್ಸಿನವರು ಗೆದ್ದರು. ಈಗಲೂ ಕೂಡ ಐದು ವರ್ಷಗಳಲ್ಲಿ ಮಾಡಬೇಕೆಂದು ವಿಧಿಸಿದ್ದನ್ನು ಮೂರೇ ವರ್ಷದಲ್ಲಿ ಮಾಡಿದ್ದಾರೆ. ಇನ್ನೆರಡು ವರ್ಷದಲ್ಲಿ ಪಂಚವಾರ್ಷಿಕ ಯೋಜನೆ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದ ಮೇಲೆ, ಚುನಾವಣೆಗಳು ನಡೆದಾಗ ಈಗಿರತಕ್ಕ ಹತ್ತು ಜನರೂ ಕೂಡ ಎದುರು ಪಕ್ಷಕ್ಕೆ ಬರಲಾರರು ಎಂದು ವಿನಯಪೂರ್ವಕವಾಗಿ ನಾನು ಹೇಳುತ್ತೇನೆ. ನಮ್ಮ ಮಾನ್ಯ ಮಿತ್ರರು ಶ್ರೀಮಾನ್ ಇಮಾಂರವರು ಈ ಮಾತು ಎಷ್ಟುಮಟ್ಟಿಗೆ ನಿಜವಾಗುತ್ತದೆಂದು 1957 ನೆಯ ಇಸವಿಯವರೆಗೂ ಕಾದು ನೋಡಲಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ಮ್ಯಾಸ್ಕರೆನ್ಹಾಸ್‌ರವರು ಬಡ್ಜೆಟ್ಟಿನ ಕೆಲವು ವಿಷಯಗಳನ್ನು ಟೀಕೆಮಾಡುತ್ತಾ ಎಲೆಕ್ಟ್ರಿಸಿಟಿ ವಿಷಯದಲ್ಲಿ ಖರ್ಚಾಗಿರುವ ಮೊಬಲಗು ಬಹಳ ಜಾಸ್ತಿಯೆಂದು ಹೇಳಿದರು. 1947 ನೆಯ ಇಸವಿಗೂ 1952 ನೆಯ ಇಸವಿಗೂ ಹೋಲಿಸಿದರೆ ಒಂದಕ್ಕೆ ಮೂರರಷ್ಟು ಖರ್ಚಾಗುತ್ತಿದೆಯೆಂದು ಹೇಳಿದರು. 1947 ನೆಯ ಇಸವಿಯಲ್ಲಿ ಡಿಪ್ರಿಸಿಯೇಷನ್ ಫಂಡಿಗೆ ಹದಿನೈದು ಲಕ್ಷ ರೂಪಾಯಿಗಳನ್ನು ತೆಗೆದಿದ್ದರು. ಆಗಿದ್ದಂಥ ಖರ್ಚಿನ $\frac{1}{5}$ ಭಾಗವನ್ನು ಇದಕ್ಕಾಗಿ ತೆಗೆದಿದ್ದರು. ಈಗ 1955-56 ನೆಯ ಇಸವಿಯಲ್ಲಿ ಶೇಕಡ ಐವತ್ತರಷ್ಟು ಡಿಪ್ರಿಸಿಯೇಷನ್ ಬಾಬಿಗೆ ತೆಗೆದಿದೆ. ಇದನ್ನು ನೋಡಿದರೆ ಡಿಪ್ರಿಸಿಯೇಷನ್ನಿಗೇ ಮೊದಲಿಗೆ ಒಂದಕ್ಕೆ ಎರಡರಷ್ಟು ಮೂರರಷ್ಟು ತೆಗೆದಿದ್ದಾರೆಂದು ಗೊತ್ತಾಗುತ್ತದೆ. ಈ ಕಾರಣದಿಂದ ಇಷ್ಟು ಖರ್ಚು ಜಾಸ್ತಿಯಾಗಿ ಕಾಣುತ್ತದೆಯೆಂಬುದನ್ನು ಅವರು ಮನಗಾಣಬೇಕು.

ಇನ್ನು ಬಡ್ಜೆಟ್ಟಿನಲ್ಲಿ ಕಂಡುಬರುವ ಕೆಲವು ಅಂಕಿಅಂಶಗಳ ವಿಷಯದಲ್ಲಿ, ಕೆಲವು ಇಲಾಖೆಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಫಾರೆಸ್ಟ್ ಇಲಾಖೆಯವರು, All India ಯೋಜನೆಯ ಪ್ರಕಾರ ದೇಶದ ಒಟ್ಟು ವಿಸ್ತೀರ್ಣದಲ್ಲಿ ಶೇಕಡ ಇಪ್ಪತ್ತೈದರಷ್ಟು ಕಾಡುಗಳನ್ನು ಉಳಿಸಿಕೊಳ್ಳಬೇಕೆಂದಿದೆ. ಹಾಲಿ ನಮ್ಮ ದೇಶದಲ್ಲಿ ಶೇಕಡ ಹದಿನಾರರಷ್ಟು ಮಾತ್ರ ಕಾಡಿದೆ. ಕೇಂದ್ರದ ಯೋಜನೆಯಲ್ಲಿ ಸಾಮಾನ್ಯವಾಗಿ ಬಯಲುಸೀಮೆಯಲ್ಲಿರತಕ್ಕ ಕಾಡುಗಳನ್ನು ಉತ್ತಮಪಡಿಸಬೇಕೆಂದು ನಮೂದಾಗಿದೆ. ಆದರೆ, ನಮ್ಮ ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಆ ಯೋಜನೆಯ ಪ್ರಕಾರ ಕೆಲಸಮಾಡುತ್ತಿಲ್ಲವೆಂದು ಮನಗಾಣಬೇಕು. ಏಕೆಂದರೆ, ಮೈದಾನದಲ್ಲಿರತಕ್ಕ ಕಾಡುಗಳ ಸ್ಥಿತಿಯನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ನಮ್ಮ ಕುಣಿಗಲ್ ತಾಲ್ಲೂಕಿನ ಒಂದು ಕಾಡಿನ ಸ್ಥಿತಿಯನ್ನು ಹೇಳುವುದಾದರೆ, ತಾವೇ ನನಗೆ ಅಕ್ಟೋಬರ್ ತಿಂಗಳಿನಲ್ಲಿ ಕೆಲವು ಅಂಕಿ ಅಂಶಗಳನ್ನು ಒದಗಿಸಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ 23,261 ಎಕರೆಗಳಿರುವ ಕಾಡು ಪ್ರದೇಶದಲ್ಲಿ ಪ್ರತಿ ವರ್ಷವೂ 1944-45 ನೆಯ ಇಸವಿಯಿಂದ 1953-54 ನೆಯ ಇಸವಿಯವರೆಗೂ ಆಗಿರತಕ್ಕ ಖರ್ಚು ಮತ್ತು ಉತ್ಪತ್ತಿ ಎಷ್ಟು ಎಂದು ಉತ್ತರ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

4-30 P.M.

ಹಾಗೆ ಅಲ್ಲಿ ಮೊದಲು ಖರ್ಚಾಗುತ್ತಿದ್ದದ್ದು 7 ಸಾವಿರ ಮಾತ್ರ. ಈಗ ಅದು 11 ಸಾವಿರದವರೆಗೂ ಹೋಗಿದೆ. ಆದರೆ ಎಂಟು ಸಾವಿರದವರೆಗೂ ಬರುತ್ತಿದ್ದಂಥ ಆದಾಯ ಈಗ ಮೂರು ಸಾವಿರಕ್ಕೆ ಇಳಿದಿದೆ. ಹೀಗೆ ಅಷ್ಟೊಂದು ದೊಡ್ಡ ಕಾಡಿನಿಂದ ಬರುತ್ತಿರುವ ಉತ್ಪತ್ತಿ ಕೇವಲ ಮೂರು ಸಾವಿರ ಮಾತ್ರ. ಆದರೆ ಇದನ್ನೊಂದು ಉತ್ಪತ್ತಿ ಅಂತ ಸಹ ಹೇಳುವುದಕ್ಕಾಗುವುದಿಲ್ಲ. ಕಾರಣವೇನೆಂದರೆ ಈ ಉತ್ಪತ್ತಿಯ ಮೇಲೆ ಎಂಟು ಸಾವಿರ ರೂಪಾಯಿಗಳ ಖರ್ಚು ಬರುತ್ತಿದೆ. ಇದನ್ನು ನೋಡಿದರೆ ಎಂಥವರೂ ಸಹ ಇದನ್ನು ಆಲೋಚನೆ ಮಾಡಬೇಕಾದಂಥ ವಿಷಯವಾಗಿದೆ. ಇದನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರು ಒಂದು ಸರಿಯಾದ ರೀತಿಯಲ್ಲಿ ವ್ಯವಸ್ಥೆಮಾಡಬೇಕೆಂದ ಹೇಳುತ್ತೇನೆ.

ಇನ್ನು ಮರಾಮತ್ ಇಲಾಖೆಯ ವಿಚಾರ.—ಇದರ ವಿಚಾರವಾಗಿ ಎಷ್ಟು ಹೇಳಿದರೂ ತೀರದಾಗಿದೆ. ಈಗ ಇರತಕ್ಕ ಕೆರೆಗಳ ಪೈಕಿ ಮೇಜರ್ ಕೆರೆಗಳ ಮೇಲಿನ ಆಡಳಿತದ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಳ್ಳತಕ್ಕದ್ದು ಆವಶ್ಯಕ. ಮೈನರ್ ಕೆರೆಗಳ ರಿಪೇರಿ ವಗೈರೆ ಕಾಂಗಾರಿಗಳನ್ನು ಹಿಂದೆ ಒಂದಾನೊಂದು ಕಾಲದಲ್ಲಿ ಆ ಹಳ್ಳಿಯ ಜನರೇ ಸೇರಿಕೊಂಡು ರಿಪೇರಿ ಮಾಡುತ್ತಿದ್ದರು. ಆದರೆ ಈಗ ಆ ಕಾಲ ಹೊರಟುಹೋಗಿದೆ. ಈಗ ಯಾರೂ ಹಾಗೆ ರಿಪೇರಿಮಾಡದೆ ಈ ಕೆರೆಗಳೆಲ್ಲಾ ಒಡೆದುಹೋಗುವಂಥ ಸ್ಥಿತಿ ಉಂಟಾಗಿದೆ. ಆದುದರಿಂದ ಈಗ ಸರ್ಕಾರದವರೇ ಈ ಕೆರೆಗಳ ರಿಪೇರಿಯ ಜವಾಬ್ದಾರಿಯನ್ನೂ ಕೂಡ ಅವರೇ ವಹಿಸಿಕೊಂಡು, ಈ ಬಗ್ಗೆ ತಗಲುವ ಖರ್ಚುವೆಚ್ಚಗಳನ್ನು ಆ ರೈತರಮೇಲೆ ಬೀಳತಕ್ಕ ರೀತಿಯಲ್ಲಿ ತಾವು ಆ ಇರಿಗೇಷನ್ ಆಕ್ಟನ್ನೂ ಕೂಡ ತಿದ್ದುಪಡಿಮಾಡಿ, ಈ ಎಲ್ಲಾ ಕೆರೆಗಳ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲಿಯವರೆಗೂ ಈ ಕೆರೆಗಳ ತೂಬಿನ ರಿಪೇರಿ ಕಾಂಗಾರಿಯನ್ನು ಕಾಂಟ್ರಾಕ್ಟ್ ಮೇಲೆ ಮಾಡಿಸುತ್ತಿದ್ದರು. ಆದುದರಿಂದ ಈ ಕೆಲಸ ಸರಿಯಾಗಿ ಆಗದೆ ಆಗಿಂದಾಗ್ಗೆ ರಿಪೇರಿಗೆ ಬರುತ್ತಲೇ ಇರುತ್ತದೆ. ಆದುದರಿಂದ ಈ ಕೆಲಸವನ್ನು ಆ ಇಲಾಖೆಯವರೇ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಬಹಳ ಕೆಲಸಗಳನ್ನು ಪೀಸ್ ವರ್ಕ್ ಪದ್ಧತಿಯಮೇಲೆ ಮಾಡಿಸತಕ್ಕದ್ದು ಬಹಳ ಹಿಂದಿನಿಂದಲೂ ಬಂದಿರತಕ್ಕಂಥ ಒಂದು ಪದ್ಧತಿಯಾಗಿದೆ. ಈ ಪದ್ಧತಿಯಿಂದ ಸರ್ಕಾರಕ್ಕೆ ಬಹಳ ಹಣ ನಷ್ಟವಾಗತಕ್ಕ ಸಂದರ್ಭವಿರುವುದರಿಂದ ಇದನ್ನು ತಪ್ಪಿಸಬೇಕೆಂದು ಸರ್ಕಾರದವರನ್ನು ಒತ್ತಾಯ ಪಡಿಸಲು ನಾನು ಈ ಹಿಂದೆ ಎಷ್ಟೋವೇಳೆ ಪ್ರಶ್ನೆಗಳನ್ನೂ ನಿರ್ಣಯಗಳನ್ನೂ ಕೂಡ ಕಳುಹಿಸಿದ್ದೆ. ಈ ಇಲಾಖೆಯವರು ಒಂದು ಸಾವಿರ ರೂಪಾಯಿಗಳ ಅಂದಾಜಿನ ಮೇಲಿರತಕ್ಕಂಥ ಕೆಲಸಗಳನ್ನೆಲ್ಲಾ ಪೀಸ್‌ವರ್ಕ್ ಸಿಸ್ಟಂಮೇಲೆ ಮಾಡದೆ ಟೆಂಡರ್ ಮೂಲಕ ಮಾಡಿಸಬೇಕೆಂದು ಇಲಾಖೆಗೆ ತಿಳಿಸಿದ್ದಾರೆಂದು ಕೇಳಿದ್ದೇನೆ. ಆದರೂ ನನಗೆ ಗೊತ್ತಿರುವಹಾಗೆ ಈಗ ಪ್ರತಿವರ್ಷವೂ ಈ ಇಲಾಖೆಯವರು ಈ ಪೀಸ್‌ವರ್ಕ್ ಸಿಸ್ಟಂಪ್ರಕಾರ ನಡೆಸತಕ್ಕ 1,000 ರೂಪಾಯಿಗಳ ಮೇಲಿನ ಕೆಲಸಗಳು 15

ಲಕ್ಷದವರೆಗೂ ಹೋಗಿರುತ್ತವೆ. ಹೀಗೆ, ಇವರು ಈ
ಕೆಲಸಗಳನ್ನೆಲ್ಲಾ ಪೀಸ್‌ವರ್ಕ್ ಆಗಿ ಮಾಡಿಸದೆ ಟೆಂಡರ್
ಬೇಸಿಸ್ ಮೇಲೆ ಮಾಡಿಸಿದರೆ ಸರ್ಕಾರಕ್ಕೆ ಎಷ್ಟೋ
ದುಡ್ಡು ಉಳಿತಾಯವಾಗುತ್ತದೆ. ಈ ಬಗ್ಗೆ ಎಲ್ಲಾ
ವಿವರಗಳನ್ನೂ ಸರ್ಕಾರದವರು ಆ ಇಲಾಖೆಯಿಂದ
ತರಿಸಿಕೊಂಡು, ಈ ಬಗ್ಗೆ ಸರಿಯಾದ ನಿಗಾ ಕೊಟ್ಟು
ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು
ನಾನು ಹೇಳುತ್ತೇನೆ.

Mr. SPEAKER.—The House will now rise for lunch and meet at 5 o'clock.

The House adjourned for Lunch at Thirty-four Minutes past Four of the Clock and re-assembled at Five of the Clock.

[MR. SPEAKER in the Chair.]

Mr. SPEAKER.—According to the programme, the Treasury Bench has now to reply.

(ಅನೇಕ ಸದಸ್ಯರುಗಳು ಈ ಬಡ್ಜೆಟ್ಟಿನ ಜನರಲ್ ಡಿಬೇ
ಟಿನಮೇಲೆ ಮಾತನಾಡಲು ನಿರ್ಧರಿಸಿರತಕ್ಕ ದಿನಗಳು
ತೀರ ಕಡಮೆ—ಇದನ್ನು ಮುಂದಿನ ಸೋಮವಾರದ
ವರೆಗೂ ಮುಂದುವರಿಸಬೇಕೆಂಬುದಾಗಿ ಸೂಚನೆಗಳ
ನ್ನಿತ್ತರು).

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿ
ಗಳು).—ನಾವು ಈಗಾಗಲೇ ಒಂದು ಕಾರ್ಯಕ್ರಮ
ವನ್ನು ಹಾಕಿಕೊಂಡಿರುತ್ತೇವೆ. ಅದರಂತೆ ನಾವು
ನಡೆಯಬೇಕಾದುದು ಮುಖ್ಯವಾದದ್ದು. ಆದಾಗ್ಯೂ
ನಿನ್ನೆಯ ದಿವಸ ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು
ಹೊತ್ತು ಸಭೆಯನ್ನು ನಡೆಸಿದ್ದಾಯಿತು. ಆದರೆ
ತಮಗೀಗ ಈ ಬಡ್ಜೆಟ್ಟಿನಮೇಲೆ ಮಾತನಾಡಲು
ಅಷ್ಟೊಂದು ಅವಕಾಶ ಸಿಕ್ಕದೆಹೋದರೂ ತಮಗೆ
ಜೋತಾ ಸೂಚನೆಗಳ ಕಾಲದಲ್ಲಿ ಮಾತನಾಡುವುದಕ್ಕೆ
ಬೇರೆ ಅವಕಾಶವಿದೆ. ಆದುದರಿಂದ ಈಗ ಹಾಕಿ
ಕೊಂಡಿರುವ ಕಾರ್ಯಕ್ರಮಕ್ಕನುಗುಣವಾಗಿ ಕೆಲಸ
ನಡೆಸಲು ಸರ್ವರೂ ಅವಕಾಶ ಮಾಡಿಕೊಡಬೇಕೆಂದು
ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಈಗ ಬಡ್ಜೆಟ್ಟಿನಮೇಲೆ ಮಾತ
ನಾಡದೆ ಇರತಕ್ಕಂಥ ಸದಸ್ಯರಿಗೆ ಅಪ್ರೋಪ್ರಿಯೇಷನ್
ಮಸೂದೆ ಬಂದಾಗ ಅದರಮೇಲೆ ಮಾತನಾಡುವುದಕ್ಕೆ
ಅವಕಾಶವಿದ್ದೇಇದೆ. ಆದುದರಿಂದ ಈಗ ಮಂತ್ರಿಗಳಿಗೆ
ಉತ್ತರಕೊಡುವುದಕ್ಕೆ ಅವಕಾಶ ಕೊಡತಕ್ಕದ್ದು ಸೂಕ್ತ
ವೆಂದು ಭಾವಿಸುತ್ತೇನೆ.

Sri K. HANUMANTHAIYA.—I do not want to curtail the liberty of the Opposition. Every year I am seeing that when the budget discussion begins, the Leader of the Opposition takes about 2 hours; and for Appropriation Bill also he takes like time. Therefore, hereafter, time must be adjusted. No doubt, the Opposition must be given due time, but there must be a certain proportion fixed.

Mr. SPEAKER.—From the first day I was requesting the House at least to allow me to limit the time. The House did not permit me to do so. Therefore, I was helpless. Yesterday also I made a similar request to the House.

Sri H. M. CHANNABASAPPA (Periyapatna).—I should like to submit for the consideration of yourself and the Government that every time we fall short of time and in the last stages we hurry through. Thereby the privilege of the members to express their views on the Budget will be curtailed.

Mr. SPEAKER.—That I know. Therefore, I requested the House even on the first day to give me permission to limit the time and the House did not permit me. Therefore, I am helpless.

Sri H. M. CHANNABASAPPA.—The number of days must be increased. There is no meaning in giving three days for discussion on the Budget and beginning to ration out time for 105 members.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಅಧ್ಯಕ್ಷರೇ
ನನ್ನ ಆಡಳಿತಕ್ಕೆ ಸಂಬಂಧಪಟ್ಟ ಒಂದೆರಡು ಇಲಾಖೆ
ಗಳ ಬಗ್ಗೆ ಹೆಚ್ಚಿನ ಟೀಕೆಗಳು ಕೇಳಿ ಬಂದಿರುವುದರಿಂದ
ಮೊಟ್ಟ ಮೊದಲನೆಯದಾಗಿ ನಾನು ಕೆಲವು ಮಾತು
ಗಳನ್ನಾಡುವುದು ಸೂಕ್ತವೆಂದು ಭಾವಿಸಿದ್ದೇನೆ.

ಮಾನ್ಯ ಸದಸ್ಯರನೇಕರು ಈ ಮರಾಮತ್ ಇಲಾ
ಖೆಗೆ ಸಂಬಂಧಪಟ್ಟ ಹಾಗೆ ತೀವ್ರವಾದಂಥ ಟೀಕೆ
ಗಳನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ನಾನು
ಸಂಕ್ಷೇಪವಾಗಿ ಜವಾಬನ್ನು ಕೊಡುವುದಕ್ಕಾಗದಿದ್ದರೂ
ಕೂಡ ಸಾಧ್ಯವಾದ ಮಟ್ಟಿಗೂ ಮುಖ್ಯ ಮುಖ್ಯ ವಿಚಾರ
ಗಳಿಗೆಲ್ಲಾ ಜವಾಬ್ ಕೊಡಲು ಪ್ರಯತ್ನ ಪಡುತ್ತೇನೆ.
ಈಗ ಮಾತನಾಡಿರತಕ್ಕಂಥ ಸದಸ್ಯರಲ್ಲಿ ಅನೇಕರು ಈ
ಇಲಾಖೆಯ ಕಾರ್ಯಕ್ರಮಗಳು ಬಹಳ ನಿಧಾನವಾಗಿ
ನಡೆಯುತ್ತಿವೆಯೆಂದು ವಾದಮಾಡಿದ್ದಾರೆ. ಜೊತೆಗೆ
ಕಾಗದ ಪತ್ರಗಳು ಜಾಗ್ರತೆ ಫೈಸಲಾಗುವುದಿಲ್ಲ ವೆಂದು
ಹೇಳಿದ್ದಾರೆ. ಈವರೆಗೆ ನಾವು ಈ ಮರಾಮತ್
ಇಲಾಖೆಗಾಗಿ 7-8 ಕೋಟಿ ರೂಪಾಯಿಗಳನ್ನು
ಖರ್ಚು ಮಾಡಿದ್ದೇವೆ. ಆದರೆ ನಾವು ಸಾರ್ವಜನಿಕರ
ಹಣವನ್ನು ಹಾಗೆ ಖರ್ಚು ಮಾಡುವಾಗ ಮುಂಜಾಗ್ರತೆ
ಯಿಂದ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳ
ಬೇಕಾದದ್ದು ತೀರಾ ಅಗತ್ಯ ಅನ್ನುವುದನ್ನು ಮಾನ್ಯ
ಸದಸ್ಯರಾರೂ ಮರೆಯಬಾರದೆಂಬ ಅಂಶವನ್ನು
ನಿರ್ಭಯವಾಗಿಯೂ ಮತ್ತು ಧೈರ್ಯದಿಂದಲೂ
ಹೇಳುತ್ತೇನೆ. ಈ ಸಂಸ್ಥಾನದ ಇತಿಹಾಸದಲ್ಲೇ ಇಲ್ಲ
ದಿದ್ದಂಥ ಕೆಲಸ ಕಾರ್ಯಗಳನ್ನು ನಾವು ಕೈಗೊಂಡು
ನಡೆಸಿರುತ್ತೇವೆ, ಈ ವರ್ಷ ನಡೆದಿರುವಂತೆ ಕೆಲಸ
ಕಾರ್ಯಗಳು ಹಿಂದೆ ಯಾವ ವರ್ಷದಲ್ಲೂ ನಡೆದಿರಲಿಲ್ಲ
ಎಂದು ಹೇಳುತ್ತೇನೆ. ಈ ಅಂದಾಜುಗಳು ತಯಾರಾ
ಗುವುದು ಬಹಳ ನಿಧಾನವಾಗುತ್ತಿದೆ ಎಂದು ಹೇಳಿದರು.

(ಶ್ರೀ ಕಡಿದಾಳ್ ಮಂಜಪ್ಪ.)

ಹೌದು ನಿಜ; ಆ ಅಂದಾಜುಗಳು ತಯಾರಾಗಲು ಸ್ವಲ್ಪ ನಿಧಾನವಾಗಿಯೇ ಆಗುತ್ತದೆ. ಈ ಕೆಲಸಗಳನ್ನೆಲ್ಲಾ ಕಾನೂನು ಪ್ರಕಾರ ನಡೆಸಬೇಕಾಗಿದೆ. ಇದಕ್ಕೆ ಕಾಲ ಹಿಡಿದೇ ಹಿಡಿಯುತ್ತದೆ. ಆದರೆ ಕೆಲಸ ಬೇಗ ಆಗಲಿ ಎನ್ನುವ ಒಂದು ದೃಷ್ಟಿಯಿಂದಲೇ ಸಾರ್ವಜನಿಕರ ಹಣ ಪೋಲಾಗುವುದಕ್ಕೆ ಅವಕಾಶ ಕೊಡಬಾರದು. ಯಾವ ಕೆಲಸವನ್ನು ತೆಗೆದುಕೊಂಡರೂ ನಾವು ಅದು ಪ್ರಯೋಜನಕಾರಿಯಾಗುತ್ತದೆಯೇ, ಅದಕ್ಕಾಗಿ ನಾವು ವಿನಿಯೋಗಿಸತಕ್ಕ ಹಣಕ್ಕೆ ಸರಿಯಾದ ಪ್ರತಿಫಲ ಅದರಿಂದ ನಮಗೆ ದೊರೆಯುತ್ತದೆಯೇ ಎನ್ನತಕ್ಕಂಥ ನಾನಾ ಅಂಶಗಳನ್ನು ನಾವು ಗಮನಿಸಬೇಕಾದದ್ದು ತುಂಬ ಅಗತ್ಯ. ಈಗಾಗಲೇ ಅನುಕೂಲವಾದಂಥ ಅನೇಕ ನೀರಾವರಿ ಯೋಜನೆಗಳನ್ನು ನಾವು ಕೈಗೊಂಡಿರುತ್ತೇವೆ ಅನೇಕ ಚಿಕ್ಕಪುಟ್ಟ ಕೆರೆಗಳನ್ನೂ, ಕಟ್ಟೆಗಳನ್ನೂ, ಜೀರ್ಣೋದ್ಧಾರಮಾಡಲಾಗಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಸುಮಾರು 25 ಸಾವಿರ ಕೆರೆಗಳಿವೆ. ಈ ಪೈಕಿ ಮೂರನೇ ಒಂದು ಭಾಗದ ಕೆರೆಗಳು ನಾದುರಸ್ತಾಗಿವೆ.

ಶ್ರೀ ಬಿ. ಹುಚ್ಚೇಗೌಡ.—ಮೂರನೇ ಎರಡು ಭಾಗದ ಕೆರೆಗಳು ನಾದುರಸ್ತಿನಲ್ಲಿವೆ.

ಶ್ರೀ ಕಡಿದಾಳ್ ಮಂಜಪ್ಪ.—ಇರಲಿ. ಅರ್ಧಭಾಗವೆಂದೇ ಇಟ್ಟುಕೊಳ್ಳೋಣ. ಈ ಕೆರೆಗಳೆಲ್ಲವನ್ನೂ ಕೇವಲ ಒಂದೆರಡು ವರ್ಷಗಳಲ್ಲಿ ಜೀರ್ಣೋದ್ಧಾರ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಕೆಲಸ ಕಾರ್ಯಗಳೇನೋ ಬಹಳ ಚಟುವಟಿಕೆಯಾಗಿಯೇ ನಡೆಯುತ್ತಿವೆ. ಆದರೆ ಹಾಗೂ ಒಂದು ವೇಳೆ ಅವು ನಿಧಾನವಾಗಿದ್ದರೆ ಅದಕ್ಕೆ ಇಲಾಖೆಯ ಅಶ್ರದ್ಧೆ ಕಾರಣವಲ್ಲ ಅದಕ್ಕೆ ಮುಖ್ಯ ಕಾರಣ ಹಣದ ಅಭಾವವೇ ಆಗಿರುತ್ತದೆ ಎಂದು ತಿಳಿಸಲಿಚ್ಛಿಸುತ್ತೇನೆ.

ಇನ್ನು ಈ ರಸ್ತೆಗಳು ಸರಿಯಾಗಿರುವುದಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. 1952 ಕ್ಕೆ ಮುಂಚೆ ಸಂಸ್ಥಾನದಲ್ಲಿರುವ ರಸ್ತೆಗಳನ್ನೆಲ್ಲಾ ನಾಲ್ಕು ತರಗತಿಗಳಾಗಿ ವಿಂಗಡ ಮಾಡಿದ್ದರು. ಕೆಲವು ರಸ್ತೆಗಳು ಜಿಲ್ಲಾ ಬೋರ್ಡು ಆಡಳಿತದಲ್ಲಿರುತ್ತವೆ. ಮತ್ತೆ ಕೆಲವು ರಸ್ತೆಗಳು ಸರ್ಕಾರದ ಆಡಳಿತಕ್ಕೊಳಪಟ್ಟಿರುತ್ತವೆ. ಈ ರಸ್ತೆಗಳ ರಿಪೇರಿಗಾಗಿ ಕೆಲವು ಭಾಗದ ಹಣವನ್ನು ಸರ್ಕಾರದವರು ಕೊಡಬೇಕಾಗಿದೆ. ಕೆಲವು ಭಾಗದ ಹಣವನ್ನು ಜಿಲ್ಲಾ ಬೋರ್ಡುಗಳವರು ಕೊಡಬೇಕಾಗಿರುತ್ತದೆ. ಈ ಹಿಂದೆ ಈ ರಸ್ತೆಗಳನ್ನೆಲ್ಲಾ ಹಾಗೆ ಕ್ಲಾಸಿಫಿಕೇಷನ್ ಮಾಡಿದ್ದುದರಿಂದ ಅವುಗಳೆಲ್ಲಾ ಅಷ್ಟು ಶೋಚನೀಯವಾದ ಸ್ಥಿತಿಯಲ್ಲಿದ್ದುವೆಂದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ನಾನಿನ್ನು ಈ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾಗಿಲ್ಲ. ಆದರೆ ಈ ರಸ್ತೆಗಳೆಲ್ಲಾ 1952ಕ್ಕೆ ಹಿಂದೆ ಯಾವ ರೀತಿಯಲ್ಲಿದ್ದುವು, ಈಗ ಯಾವ ರೀತಿಯಲ್ಲಿರುತ್ತವೆ ಅನ್ನುವುದನ್ನು ನಾನು ಹೆಚ್ಚಿಗೆ ವರ್ಣನೆ ಮಾಡಬೇಕಾಗಿಲ್ಲ. ಬಾಕೀ ಸಂಸ್ಥಾನಗಳಲ್ಲಿರತಕ್ಕ ರಸ್ತೆಗಳ ಸ್ಥಿತಿಯನ್ನೂ ಮತ್ತು ನಮ್ಮ ಸಂಸ್ಥಾನದಲ್ಲಿರತಕ್ಕಂಥ ರಸ್ತೆಗಳ ಸ್ಥಿತಿಯನ್ನೂ ಹೋಲಿಕೆ ಹಾಕಿ ನೋಡಿದರೆ ನಮ್ಮ ರಸ್ತೆಗಳು ಮೊದಲಿದ್ದುದಕ್ಕಿಂತಲೂ ಈಗ ಸ್ವಲ್ಪ ಮಟ್ಟಿಗಾದರೂ ಚೆನ್ನಾಗಿರುತ್ತವೆಂದು ನಾನು ಧೈರ್ಯವಾಗಿ ಹೇಳುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.— 'ಮೊದಲಿದ್ದುದಕ್ಕಿಂತಲೂ' ಅಂದರೆ ಅದಾವ 'ಮೊದಲೋ'.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಕಾಲದಲ್ಲೂ ಅಷ್ಟೆ. 1952-53 ನೆಯ ಇಸವಿಗೆ ಹಿಂದೆ ಈ ಸ್ಟೇಟ್ ಫಂಡ್ ರಸ್ತೆ 4,247 ಮೈಲಿ ಇತ್ತು. ಈಗ ಅದನ್ನು 6,886 ಮೈಲಿಗಳವರೆಗೆ ಹೆಚ್ಚಿಸಲಾಗಿದೆ. 1952-53 ರಲ್ಲಿ ಈ ರಸ್ತೆಗಳ ಸ್ಪೆಷಲ್ ರಿಪೇರಿಗಾಗಿ 49,51,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1953-54 ರಲ್ಲಿ 72,60,353 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1954-55 ರಲ್ಲಿ 86,67,656 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದಾಗ್ಯೂ ಕೆಲವು ರಸ್ತೆಗಳು ಇನ್ನೂ ಉತ್ತಮವಾಗಿಲ್ಲ ಎನ್ನತಕ್ಕದ್ದು ಸರ್ಕಾರದವರ ಗಮನಕ್ಕೂ ಬಂದಿದೆ. ಆದರೆ ಜಿಲ್ಲಾ ಬೋರ್ಡುಗಳ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಸಂಸ್ಥಾನದಲ್ಲಿರತಕ್ಕಂಥ ಎಲ್ಲಾ ರಸ್ತೆಗಳನ್ನೂ ಸರ್ಕಾರದವರೇ ತೆಗೆದುಕೊಂಡು ಆ ರಸ್ತೆಗಳನ್ನೆಲ್ಲಾ ಸ್ಟೇಟ್ ಫಂಡ್ ರಸ್ತೆಗಳನ್ನಾಗಿ ಪರಿವರ್ತಿಸಬೇಕಾಗಿದ್ದರೆ ಸುಮಾರು 2 ಕೋಟಿ ರೂಪಾಯಿಗಳನ್ನು ನಾವು ಪ್ರತಿ ವರ್ಷವೂ ಖರ್ಚು ಮಾಡಬೇಕಾಗಿ ಬರುತ್ತದೆಯೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀ ಎಚ್. ಕೆ. ಶಿವರುದ್ರಪ್ಪನವರು ಮಾತನಾಡುತ್ತ ಅವರು ಯಾವುದೋ ಒಂದೆರಡು ಕೆರೆಗಳ ವಿಚಾರವನ್ನು ನನ್ನ ಕೈಲಿ ಹೇಳಿದ್ದ ಹಾಗೂ, ಆದರೆ ನಾನು ಅವುಗಳ ಬಗ್ಗೆ ಸಾಕಷ್ಟು ಗಮನಕೊಡಲಿಲ್ಲವೆಂದೂ, ಆದುದರಿಂದ ಈ ನನ್ನ ಪೋರ್ಟ್‌ಫೋಲಿಯೋವನ್ನು ಡಾ॥ ನಾಗನಗೌಡರಿಗೆ ಬದಲಾಯಿಸಬೇಕೆಂದೂ ಹೇಳಿದರು. ಮಂತ್ರಿಗಳ ದಕ್ಷತೆಯನ್ನು ಅಳತೆ ಮಾಡಬೇಕಾಗಿದ್ದರೆ ಅದನ್ನು ಅವರ ಪ್ರಾಮಾಣಿಕತೆ, ಅವರೇನು ನಿಷ್ಪಕ್ಷಪಾತ ಭಾವನೆಯಿಂದ ಕೆಲಸ ಮಾಡುತ್ತಿದ್ದಾರೆಯೇ, ಇಲ್ಲವೇ ಅನ್ನುವುದನ್ನು ಗಮನಕ್ಕೇ ತೆಗೆದುಕೊಳ್ಳದೆ, ಯಾವುದೋ ಒಂದೆರಡು ಕೆರೆಗಳ ವಿಚಾರದಲ್ಲಿ ನಾನು ಸಾಕಷ್ಟು ಗಮನಕೊಡಲಿಲ್ಲ, ಆದುದರಿಂದ ನಾನು ಈ ಕೆಲಸಕ್ಕೆ ನಾಲಾಯಖ್ ಎಂದು ಹೇಳುವುದು ಸರಿಯಾದದ್ದಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ನಾನು ಹಾಗೆ ಹೇಳಲಿಲ್ಲ. ತಾವು ಶಿವಮೊಗ್ಗಕ್ಕೆ ಕೊಡುತ್ತಿರುವಷ್ಟು ನಿಗಾವನ್ನು ನಮ್ಮ ಜಿಲ್ಲೆಗೆ ಕೊಡುತ್ತಿಲ್ಲವೆಂದು ಹೇಳಿದೆನು.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಹಾಗೆ ಎಲ್ಲಿ ಆ ಶಿವಮೊಗ್ಗಾ ಜಿಲ್ಲೆಗಾಗಲಿ ಅಥವಾ ಹಾಸನ ಜಿಲ್ಲೆಗಾಗಲಿ ವಿಶೇಷವಾಗಿ ಹಣವನ್ನು ಖರ್ಚು ಮಾಡಿದ್ದೇವೆ ಅನ್ನುವುದಕ್ಕೆ ಬಡ್ಜೆಟ್ ಮೂಲಕ ಅಂಕಿ ಅಂಶಗಳನ್ನು ತಾವು ಶೇಖರಣೆ ಮಾಡಿ ತೋರಿಸಿ ನೋಡೋಣ. ಆಗ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ಲಕ್ಕವಳ್ಳಿ ಜಲಾಶಯ ಮತ್ತು ಭದ್ರಾ ಜಲಾಶಯಗಳಿಗಾಗಿ 17 ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚು ಮಾಡಿದ್ದೇವೆ. ಇದರಿಂದ ಚಿತ್ರದುರ್ಗ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಬಹಳ ಅನುಕೂಲವಾಗುತ್ತದೆ. ಇದೇ ರೀತಿ ಮೈಸೂರು ಜಿಲ್ಲೆಯಲ್ಲೂ ಕೂಡ ನುಗು, ಕೆಂಚನಕೊಪ್ಪದ ಕೆರೆ, ನವಿಲೂರು ಕೆರೆ, ಕೃಷ್ಣರಾಜಸಾಗರ ಹೀಗೆ ಎಷ್ಟೋ ಕಾಂಗಾರಿಗಳನ್ನು ಅಲ್ಲಿಯೂ ಮಾಡಿಸಲಾಗಿವೆ.

ಇನ್ನು ಶ್ರೀ ಕೆ. ಪುಟ್ಟಸ್ವಾಮಿಯವರು, ಮಾತನಾಡುತ್ತಾ ಯಾವುದೋ ಒಂದು ಪ್ರಸಂಗವನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾಗ್ಯೂ ಅದಕ್ಕೆ ಸರ್ಕಾರದವರು ಇದುವರೆಗೂ ಯಾವ ಒಂದು ವಿಚಾರಣೆಯನ್ನೂ ನಡೆಸಿರುವುದಿಲ್ಲ, ಇದರಿಂದ ಸರ್ಕಾರದವರು

ತಮ್ಮ ಕರ್ತವ್ಯದಲ್ಲೊಂದು ಲೋಪ ಮಾಡಿದ್ದಾರೆಂದು ಹೇಳಿದ್ದಾರೆ. ಅದು ಕಪಿನಿ ನದಿಯ ನಾಲೆಗೆ ಸಂಬಂಧಪಟ್ಟ ವಿಷಯ. ಅವರು ಈ ಕಪಿನಿ ನದಿಯ ಕಾಲುವೆ ನೀರು ದೂರ ಪ್ರದೇಶದ ಜಮೀನುಗಳಿಗೆ ಸರಿಯಾಗಿ ಹಾಯುತ್ತಿಲ್ಲ, ಹೀಗಾಗಿ 100-200 ಎಕರೆ ಜಮೀನಿಗೆ ನೀರಿಲ್ಲದಂತಾಗಿದೆ ಎಂದು ತಿಳಿಸಿದ್ದರು. ಅದಕ್ಕಾಗಿ ನಮ್ಮ ಅಧಿಕಾರಿಗಳು ಸಕಾಲದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದರಿಂದ ಹಾಗೆ ಹಾಳಾಗುತ್ತಿದ್ದಂಥ ಬೆಳೆಯೆಲ್ಲ ಉಳಿದು ರೈತರಿಗೆಲ್ಲಾ ಬಹಳ ಅನುಕೂಲವಾಗಿದೆ ಎಂದು ಶ್ರೀ ಕೆ. ಪುಟ್ಟಸ್ವಾಮಿಯವರೇ ನಮ್ಮ ಚೀಫ್ ಇಂಜಿನಿಯರ್ ಅವರಿಗೆ ಈ ಬಗ್ಗೆ ಅಭಿನಂದನೆಗಳನ್ನೂ ಕೂಡ ಸಲ್ಲಿಸಿದ್ದರೂ ಅದನ್ನೆಲ್ಲಾ ಮರೆತು ಅವರೀಗ ಹೀಗೆ ಹೇಳಿದ್ದಾರೆ.

ಎರಡನೆಯ ವಿಚಾರ ಬಹಳ ಪ್ರಾಮುಖ್ಯವಾಗಿ ಮಾನ್ಯ ಸದಸ್ಯರ ಗಮನವನ್ನು ಸೆಳೆದದ್ದು ಜಮೀನು ಹಂಚಿಕೆಯ ವಿಚಾರ. ಈ ವಿಚಾರದಲ್ಲಿ ಕೆಲವು ಸಂದರ್ಭಗಳಲ್ಲಿ ತಡವಾಗುತ್ತದೆನ್ನುವುದು ನಿಜ. ನಾನಾ ಕಾರಣಗಳಿಂದ ತಡವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳ ಅಲಕ್ಷ್ಯದಿಂದಲೂ ತಡವಾಗುತ್ತದೆ. ಈ ವಿಷಯದಲ್ಲಿ ಮಾನ್ಯ ಸದಸ್ಯರು ಎಷ್ಟು ಆಸಕ್ತಿ ವಹಿಸಿದ್ದಾರೋ ಅಷ್ಟೇ ಆಸಕ್ತಿಯನ್ನು ಸರ್ಕಾರದವರೂ ವಹಿಸಿದ್ದಾರೆ; ಮಾನ್ಯ ಸದಸ್ಯರು ಎಷ್ಟು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೋ ಅಷ್ಟೇ ಅಸಮಾಧಾನವನ್ನು ಕೆಲವು ಅಧಿಕಾರಿಗಳ ವಿಚಾರದಲ್ಲಿ ವ್ಯಕ್ತಪಡಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಲಕ್ಷಾಂತರ ಎಕರೆ ಜಮೀನು ಸರ್ಕಾರದ ವಶದಲ್ಲಿದೆ, ಆದರೆ ಅವರು ಹಂಚುತ್ತಿಲ್ಲ ಎಂಬ ಭಾವನೆ ಅನೇಕ ಸದಸ್ಯರಲ್ಲಿರುವಂತೆ ತೋರುತ್ತದೆ. ಮೈಸೂರು ಸಂಸ್ಥಾನದಲ್ಲಿ ಒಟ್ಟು ಇರತಕ್ಕ ಭೂಮಿ 2,13,19,444 ಎಕರೆ. ಇದರಲ್ಲಿ 22,60,706 ಎಕರೆ ಅರಣ್ಯ, ಸಾಗುವಳಿಗೆ ಯೋಗ್ಯವಾಗಿಲ್ಲದಿರತಕ್ಕ ಜಮೀನು 10,55,163 ಎಕರೆ, ವ್ಯವಸಾಯವಲ್ಲದೆ ಇತರ ಉಪಯೋಗಕ್ಕೆ ವಿನಿಯೋಗಿಸಲ್ಪಟ್ಟಿರುವ ಜಮೀನು 14,54,942 ಎಕರೆ, ಸಾಗುವಳಿಗೆ ಯೋಗ್ಯವಾದ ಜಮೀನು 8,64,814 ಎಕರೆ.

	ಎಕರೆ
Permanent pastures and other grazing lands.	38,14,094
Lands under miscellaneous three crops and groves not included in net area sown.	4,36,314
Current fallows.	14,79,165
Other fallows.	10,76,785
Net area sown.	79,84,594

ಇದು ಬಳ್ಳಾರಿಯೂ ಸೇರಿ. ಮಾನ್ಯ ಸದಸ್ಯರು ಊಹೆ ಮಾಡಿಕೊಂಡಿರುವಷ್ಟು ಜಮೀನು ಸರ್ಕಾರದ ವಶದಲ್ಲಿಲ್ಲ. ಮಲೆನಾಡಿನಲ್ಲಿ ಬೇಕಾದಷ್ಟು ಜಮೀನಿದ್ದರೂ ಅದೆಲ್ಲವೂ ಸಾಗುವಳಿಗೆ ಯೋಗ್ಯವಾದುದೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಭಾಗ ಅರಣ್ಯ, ಮತ್ತೆ ಕೆಲವು ಭಾಗ ಸಾಗುವಳಿಗೆ ಲಾಯಕ್ಕಾಗಿಲ್ಲದ ಜಮೀನು. ಎಲ್ಲೋ ಅಲ್ಪಸ್ವಲ್ಪ ಜಮೀನು ಪೆರಿಯಾಪಟ್ಟಣ, ಹುಣಸೂರು ಮುಂತಾದ ಸ್ಥಳಗಳಲ್ಲಿದೆ. ಅಲ್ಲಿಗೆ ಹೋಗುವುದಕ್ಕೆ ಜನರು ಇದುವರೆಗೆ ಹಿಂದೇಟು ಹೊಡೆಯುತ್ತಿದ್ದರು. ಈಗ ದರಖಾಸ್ತುಗಳು ಹೇರಳವಾಗಿ ಬರುತ್ತಿವೆ. ಅವುಗಳನ್ನು ವಿಲೇ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಸಾಧ್ಯವಾದಷ್ಟೂ ಜಮೀನುಗಳನ್ನು ಆಯಾ ಗ್ರಾಮಗಳಿಗೇ ಹೋಗಿ ಹಂಚುವ ಸಲಹೆಯನ್ನು ಶ್ರೀವರ್ಯಾ ಪಟ್ಟಾಭಿರಾಮಯ್ಯರವರು ಮಾಡಿದ್ದಾರೆ. ಇದನ್ನು ಪ್ರಾಯೋಗಿಕವಾಗಿಯಾದರೂ ಕೆಲವು ಕಡೆ ಮಾಡುತ್ತೇನೆಂದು ಅರಿಕೆ ಮಾಡುತ್ತೇನೆ. ಜಮೀನಿದ್ದವರಿಗೇ ಜಮೀನು ಕೊಡುತ್ತಾರೆಂದು ಕೆಲವರು ಆಪಾದನೆ ಮಾಡಿದ್ದಾರೆ. 1952ನೆಯ ಇಸವಿಯಲ್ಲಿಯೇ ಜಮೀನಿಲ್ಲದವರಿಗೆ ಕೊಡಬೇಕೆಂಬ ನೀತಿಯನ್ನು ಸರ್ಕಾರದವರು ಸ್ಪಷ್ಟಪಡಿಸಿದ್ದಾರೆ. ಜಮೀನಿಲ್ಲದವರಿಗೇ ಜಮೀನು ದೊರೆಯಬೇಕೆಂದು ಮಾನ್ಯ ಸದಸ್ಯರಿಗೆಷ್ಟು ಆಸೆಯಿದೆಯೋ ಸರ್ಕಾರಕ್ಕೂ ಅಷ್ಟೇ ಆಸೆ ಇದೆ. ಜಮೀನಿರುವವರು ಇಲ್ಲದಿರುವವರನ್ನು ಪ್ರೇರೇಪಿಸಿ ಅವರ ಮೂಲಕ ತಾವೇ ಜಮೀನು ಪಡೆದರೆ ಸರ್ಕಾರದವರು ಕಂಡುಹಿಡಿಯುವುದು ಕಷ್ಟ. ಜೀವನದ ಎಲ್ಲ ಸಮಸ್ಯೆಗಳನ್ನೂ ಕಾನೂನು ಮೂಲಕ ಕಟ್ಟಿ ಹಾಕುವುದು ಅಷ್ಟು ಸುಲಭವಲ್ಲವೆಂದು ಅರಿಕೆಮಾಡಿಕೊಳ್ಳಬೇಕಾಗಿದೆ.

ಮತ್ತೊಂದು ಸಲಹೆಯನ್ನು ಶ್ರೀವರ್ಯಾ ಪಟ್ಟಾಭಿರಾಮಯ್ಯರವರೂ ಇತರ ಕೆಲವರೂ ಮಾಡಿದ್ದಾರೆ. ಸಾಗುವಳಿಗೆ ಯೋಗ್ಯವಾದ ಮತ್ತು ಸರ್ಕಾರದವರು ಕೊಡುವುದಕ್ಕೆ ತಯಾರಾಗಿರತಕ್ಕ ಜಮೀನುಗಳ ಪಟ್ಟಿಯನ್ನು ಪ್ರತಿಯೊಂದು ತಾಲ್ಲೋಕು ಕಚೇರಿಯಲ್ಲಿಯೂ ತಯಾರಿಸಿಡಬೇಕೆಂದು ಹೇಳಿದ್ದಾರೆ. ಈಗಾಗಲೇ ಇಂಥ ಪಟ್ಟಿ ಪ್ರತಿ ತಾಲ್ಲೂಕು ಕಚೇರಿಯಲ್ಲಿಯೂ ಇದೆಯೆಂದು ಅರಿಕೆ ಮಾಡುತ್ತೇನೆ. ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಜಮೀನಿಗೆ ದರಖಾಸ್ತು ಹಾಕುವವರು ಯಾವ ರೀತಿ ವರ್ತಿಸುತ್ತಾರೆಂಬುದನ್ನು ತಿಳಿದುಕೊಳ್ಳಬೇಕು. ಒಂದೇ ಜಮೀನಿಗೆ ರೆವಿನ್ಯೂ ಇನ್ಸ್ಪೆಕ್ಟರಿಂದ ಹಿಡಿದು ರೆವಿನ್ಯೂ ಮಂತ್ರಿಗಳವರೆಗೂ ಎಲ್ಲರಿಗೂ ಅರ್ಜಿ ಹಾಕುತ್ತಾರೆ. ಡೆಪ್ಯುಟೀ ಕಮಿಷನರು, ಸಬ್‌ಡಿವಿಜನ್ ಆಫೀಸರು, ಅಮಲ್ದಾರರು ಎಲ್ಲರಿಗೂ ಅರ್ಜಿಹಾಕುತ್ತಾರೆ. ರೆವಿನ್ಯೂ ಕಮಿಷನರು, ಮಂತ್ರಿಗಳು ಎಲ್ಲೆಲ್ಲಿ ಕೊಡಲು ಸಾಧ್ಯವೋ ಅಲ್ಲೆಲ್ಲಾ ಹೇರಳವಾಗಿ ಅರ್ಜಿಗಳು ಬರುತ್ತವೆ. ಕೆರೆ ಅಂಗಳ, ಈಚಲುವನ, ಅಮೃತ್‌ಮಹಲ್ ಕಾವಲು ಮುಂತಾದ ರಿಜರ್ವ್ ಮಾಡಬೇಕಾದ ಜಮೀನುಗಳಿಗೆಲ್ಲಾ ದರಖಾಸ್ತುಗಳು ಬಂದರೆ, ಸಂಬಂಧಪಟ್ಟ ಇಲಾಖೆಯ ಅಭಿಪ್ರಾಯವನ್ನು ಪಡೆಯಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ತೀರ್ಮಾನಿಸಲು ಸ್ವಲ್ಪಕಾಲ ಹಿಡಿಯುತ್ತದೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನಿಗೆ ದರಖಾಸ್ತು ಕೊಟ್ಟರೆ ರೆವಿನ್ಯೂ ಇಲಾಖೆಯವರು ಅರಣ್ಯ ಇಲಾಖೆಯ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ. ಅವರು ಆ ಜಮೀನನ್ನು ಬಿಟ್ಟುಕೊಡದೇ ಇದ್ದರೆ ಆಗ ರೆವಿನ್ಯೂ ಇಲಾಖೆಯವರು ಅದನ್ನು ಕೊಡುವುದಕ್ಕಾಗುವುದಿಲ್ಲ. ಹೀಗೆ ಅನೇಕ ಕಾರಣಗಳಿಂದ ವಿಲೇವಾರಿಯಲ್ಲಿ ನಿಧಾನವಾಗುತ್ತದೆ.

ಹರಿಜನರಿಗೆ ಜಮೀನು ಕೊಟ್ಟಾಗ ಇಲ್ಲದೇ ಇರುವ ತಕರಾರುಗಳು ಬರುತ್ತವೆ, ಅಪೀಲುಗಳು ಬರುತ್ತವೆ ಎಂದು ಹೇಳಿದರು. ಯಾವ ಜಮೀನಿಗೆ ದರಖಾಸ್ತು ಹಾಕಿದರೂ ತಕರಾರುಗಳೂ, ಅಪೀಲುಗಳೂ ಬರುತ್ತವೆ. ಅಪೀಲು ಮಾಡತಕ್ಕ ಅಧಿಕಾರವನ್ನು ಸಾರ್ವಜನಿಕರಿಗೆ ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ಕೊಡಲಾಗಿದೆ. ಯಾರಿಗಾದರೂ ಜಮೀನು ಕೊಟ್ಟಿದ್ದರೆ ಅದರ ಸಂಬಂಧವಾಗಿ ಬೇರೆ ಯಾರಾದರೂ ಅಪೀಲು ಹಾಕುವುದಾದರೆ, ಹಾಕಬೇಡಿ ಎಂದು ಹೇಳಿ ಸರ್ಕಾರದವರು ತಪ್ಪಿಸುವುದಕ್ಕಾಗುವುದಿಲ್ಲ. ಇದಕ್ಕೆ ಲ್ಯಾಂಡ್ ರೆವಿನ್ಯೂ

(ಶ್ರೀ ಕಡಿದಾಳ್ ಮಂಜಪ್ಪ.)

ಕೊಡನ್ನೇ ಅಪೀಲಿಲ್ಲದಂತೆ ಬದಲಾಯಿಸಬೇಕು! ಹೀಗೆ ಮಾಡುವುದು ಸೂಕ್ತವೆ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು.

ಕೆಲವು ಮಾನ್ಯ ಸದಸ್ಯರು ಅಧಿಕಾರಿಗಳ ವರ್ತನೆಯ ವಿಷಯದಲ್ಲಿ ಟೀಕಿಸಿ ಮಾತನಾಡಿದ್ದಾರೆ. ಅಧಿಕಾರಿಗಳು ಸಾರ್ವಜನಿಕರ ವಿಚಾರದಲ್ಲಿ ಸಹಾನುಭೂತಿಯಿಂದಲೂ, ಗೌರವದಿಂದಲೂ ವರ್ತಿಸುತ್ತಿಲ್ಲವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಅಧಿಕಾರ ವರ್ಗಕ್ಕೆ ನಿರ್ದಿಷ್ಟವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಸಾರ್ವಜನಿಕರೊಡನೆ ಅವರು ವ್ಯವಹರಿಸುವಾಗ ಗೌರವದಿಂದ ಮತ್ತು ನಮ್ರತೆಯಿಂದ ವರ್ತಿಸಬೇಕೆಂದು ಪದೇ ಪದೇ ಒತ್ತಿ ತಿಳಿಸಲಾಗಿದೆ. ಅನೇಕ ಸಂದರ್ಭಗಳಲ್ಲಿ ಈ ವಿಚಾರದಲ್ಲಿ ಸರ್ಕಾರದವರು ಕಡ್ಡಾಯವಾಗಿ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಎಲ್ಲಾದರೂ ಅಪ್ಪಿತಪ್ಪಿ ಯಾರಾದರೂ ದೊಡ್ಡ ಅಥವಾ ಸಣ್ಣ ಅಧಿಕಾರಿಗಳು ಸಾರ್ವಜನಿಕರ ವಿಚಾರದಲ್ಲಿ ಸಹಾನುಭೂತಿಯಿಲ್ಲದೆ ಅಥವಾ ಅಗೌರವದಿಂದ ವರ್ತಿಸಿದರೆ ಅಂಥ ಸಂದರ್ಭಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತಾರೆಂದು ಅರಿಕೆ ಮಾಡುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು ದೇವಸ್ಥಾನಗಳನ್ನು ಪುನರುದ್ಧಾರ ಮಾಡತಕ್ಕದ್ದು ಅಗತ್ಯವೆಂದು ಹೇಳಿದ್ದಾರೆ. ದೇವರ ಮೇಲೆ ಸಾರ್ವಜನಿಕರಿಗೂ ಭಕ್ತಿ ಇರಬೇಕಾದುದು ಅಗತ್ಯ. ಪೂರ್ವ ಕಾಲದಲ್ಲಿ ಸಾರ್ವಜನಿಕರು ದೇವಸ್ಥಾನಗಳ ನಿರ್ಮಾಣದ ಬಗ್ಗೆ ಬಹಳ ಪ್ರಯತ್ನ ಮಾಡುತ್ತಿದ್ದರು. ಅವರು ಕಟ್ಟಿರತಕ್ಕ ದೇವಸ್ಥಾನಗಳನ್ನು ನಾವು ಉಳಿಸಿಕೊಳ್ಳತಕ್ಕದ್ದು ಅಗತ್ಯ. ಆದರೆ ಈ ಭಾರವನ್ನು ಸರ್ಕಾರದ ಮೇಲೆ ಹಾಕಿದರೆ ಕಷ್ಟವಾಗುತ್ತದೆ. ಸಾರ್ವಜನಿಕರೂ ಕೂಡ ಈ ವಿಚಾರದಲ್ಲಿ ಸಾಕಷ್ಟು ಭಾರವನ್ನು ಹೊರುವುದಕ್ಕೆ ಸಿದ್ಧವಾಗಿರಬೇಕೆಂದು ಅರಿಕೆ.

ರಾಜಕೀಯದಲ್ಲಿ ನೊಂದವರಿಗೆ ಜಮೀನು ಕೊಡತಕ್ಕ ನೀತಿಯ ವಿಚಾರವಾಗಿ ಶ್ರೀಮಾನ್ ನಾಗರಾಜಮೂರ್ತಿಯವರು ಟೀಕಿಸಿದರು. 1947 ರಿಂದ ಇಲ್ಲಿಯವರೆಗೆ political sufferersಗೆ 1,785 ಎಕರೆಗಳನ್ನು ಸರ್ಕಾರದವರು ಕೊಟ್ಟಿದ್ದಾರೆ, ಲಕ್ಷಾಂತರ ಎಕರೆಗಳನ್ನೇನೂ ಕೊಟ್ಟಿಲ್ಲ. ಬಹಳ ಸ್ವಲ್ಪ ವಿಸ್ತೀರ್ಣವೆಂದು ಮಾನ್ಯ ಸದಸ್ಯರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಅದರಲ್ಲಿಯೂ ರಾಜಕೀಯದಲ್ಲಿ ನೊಂದವರಿಗೆ ಜಮೀನು ಕೊಡುವಾಗ ಬಡವರಿಗೇ ಕೊಡಬೇಕೆಂದು ಸರ್ಕಾರದ ಆಜ್ಞೆ ಇದೆ. ಇದೇ ಸಂದರ್ಭದಲ್ಲಿ ಸರ್ಕಾರದವರು 1943ನೆಯ ಇಸವಿಯಿಂದ ಇಲ್ಲಿಯವರೆಗೆ ಎಷ್ಟು ಜಮೀನುಗಳನ್ನು ಹಂಚಿದ್ದಾರೆಂಬ ಅಂಕಿ ಅಂಶಗಳನ್ನು ಸಭೆಯ ಮುಂದಿಡುವುದು ಅಗತ್ಯ.

(1) The extent of lands granted under the ordinary Darkhast rules from 1942-43 up to 1953 is 4,89,106 acres.

(2) The extent of lands granted to the Depressed Class members only free of cost under Depressed Class rules from 42-43 up to end of May 1952 is 72,224 acres.

(3) The extent of land granted to other class of people from 42-43 up to end of May 52 is 4,16,942 acres.

(4) Land granted subsequent to 1952 ಎಂದರೆ 1952 ರಿಂದ ಇಲ್ಲಿಯವರೆಗೆ 1,13,931 ಎಕರೆ ಜಮೀನನ್ನು ಬಡವರಿಗೆ, ಅದರಲ್ಲಿಯೂ ಜಮೀನಿಲ್ಲದರುವವರಿಗೆ ಮತ್ತು ಅಲ್ಪ ಸ್ವಲ್ಪ ಜಮೀನಿದ್ದವರಿಗೆ ಹಂಚಲಾಗಿದೆ, ಈ ಪೈಕಿ 20,000 ಎಕರೆಗಳನ್ನು ಡಿಪ್ರೆಸ್ಡ್ ಕ್ಲಾಸ್ ರೂಲ್ಸ್ ಪ್ರಕಾರ ನಿಮ್ನ ತರಗತಿಯವರಿಗೆ ಹಂಚಲಾಗಿದೆ.

5-30 P.M.

ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರದಲ್ಲಿ ಶ್ರೀಮಾನ್ ಪಳನಿಯಪ್ಪನ್‌ರವರು ತೀವ್ರವಾಗಿ ಟೀಕೆಗಳನ್ನು ಮಾಡಿದ್ದಾರೆ. ಈ Public Service Commission ರಾಜ್ಯಾಂಗದ ಪ್ರಕಾರ ನೇಮಿಸಲ್ಪಟ್ಟ ಒಂದು ಸಂಸ್ಥೆ. ಈ ಸಂಸ್ಥೆಗೆ ರಾಜ್ಯಾಂಗದಲ್ಲಿ ಕೆಲವು ಕರ್ತವ್ಯಗಳನ್ನು ನಮೂದುಮಾಡಿದ್ದಾರೆ. ರಾಜ್ಯಾಂಗದಲ್ಲಿ ವಿಧಾಯಕವಾಗಿರುವ ರೀತಿಯಲ್ಲಿ ಕೆಲವು ವಿಚಾರಗಳಲ್ಲಿ ಸರಕಾರದವರು Public Service Commissionರವರ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ. ಈ ಅಭಿಪ್ರಾಯಕ್ಕೆ ವಿರೋಧವಾಗಿ ಸರಕಾರದವರು ತೀರ್ಮಾನ ಮಾಡಬೇಕಾದರೆ ಸರಿಯಾದ ಕಾರಣಗಳನ್ನು ಕೊಡಬೇಕು. ಆ ಕಾರಣಗಳನ್ನು ರಿಪೋರ್ಟ್ ರೂಪದಲ್ಲಿ ಶಾಸನಸಭೆ ಮುಂದೆ ಇಡಬೇಕು. ಸರ್ಕಾರದವರು ಬಹಳ ಸಂದರ್ಭಗಳಲ್ಲಿ Public Service Commissionರ ಶಿಫಾರಸಿಗೆ ವಿರುದ್ಧವಾಗಿ ಆರ್ಡರ್ ಮಾಡಿರುವುದೂ ಉಂಟು. ಆದರೆ ಬಹಳ ಸಂದರ್ಭಗಳಲ್ಲಿ Public Service Commissionರ ಅಭಿಪ್ರಾಯಕ್ಕೆ ಅನುಸಾರವಾಗಿ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದರಲ್ಲಿ ಸರ್ಕಾರದ ಲೋಪ ಇಲ್ಲವೆಂದು ಅರಿಕೆಮಾಡಿ ಕೊಳ್ಳಬೇಕಾಗಿದೆ. ಶ್ರೀಮಾನ್ ಎಸ್. ಶ್ರೀನಿವಾಸ ಅಯ್ಯಂಗಾರ್‌ರವರು ಮಾತನಾಡುತ್ತಾ ಇದ್ದಾಗ ಮಂತ್ರಿಗಳ ನಿವಾಸಗಳ ನಿರ್ಮಾಣಕ್ಕೋಸ್ಕರ budgetನಲ್ಲಿ ಹಣವನ್ನು ಒದಗಿಸಿದ್ದಾರೆ ಎಂದು ಹೇಳಿದರು. ಆ ರೀತಿ ಹಣ ಒದಗಿಸಿಲ್ಲ ಎಂದು ಹೇಳಬೇಕಾಗಿದೆ. ಆಮೇಲೆ ಬರತಕ್ಕ ಕಂದಾಯವನ್ನು ಸಾಕಷ್ಟು ಪ್ರಮಾಣದಲ್ಲಿ ವಸೂಲು ಮಾಡುತ್ತಾ ಇಲ್ಲವೆಂದು ಅವರು ಅಪ್ಪಣೆ ಕೊಡಿಸಿದ್ದಾರೆ. ವಿಶ್ವೇಶ್ವರಯ್ಯ ಕೆನಾಲ್ ಏರಿಯಾದಲ್ಲಿ ಎಲ್ಲಾ ವರ್ಷಕ್ಕಿಂತಲೂ ಜಾಸ್ತಿಯಾಗಿ 5 ಲಕ್ಷ ರೂಪಾಯಿಗಳನ್ನು 53-54ನೇ ಸಾಲಿನಲ್ಲಿ ವಸೂಲು ಮಾಡಿದ್ದಾರೆಂದು ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್.—ಬಾಕಿ ಎಷ್ಟು ಇದೆ?

ಶ್ರೀ ಕಡಿದಾಳ್ ಮಂಜಪ್ಪ.—1—2—1955ರ ವರೆಗೆ ಸುಮಾರು 71 ಲಕ್ಷ ಚಿಲ್ಲರೆ ಕರೆಂಟ್ ಡಿಮ್ಯಾಂಡ್ ಸೇರಿಸಿದೆ. ಹೋದ ವರುಷ ಸಕ್ಕರೆ ಕಾರ್ಖಾನೆ ಕೆಲಸ ಮಾಡದೇ ಇದ್ದುದರಿಂದ ಸಾಕಷ್ಟು ಪ್ರಮಾಣದಲ್ಲಿ ವಸೂಲು ಮಾಡುವುದಕ್ಕಾಗಲಿಲ್ಲ ಎಂದು ತಿಳಿಸಲಿಚ್ಛಿಸುತ್ತೇನೆ. ಯಾರೋ ಒಬ್ಬರು ಮಾನ್ಯ ಸದಸ್ಯರು ಲಂಚನಿರೋಧ ಇಲಾಖೆಯ ಅನವಶ್ಯಕತೆಯನ್ನು ಪ್ರಶ್ನಿಸಿದ್ದಾರೆ. ಲಂಚನಿರೋಧ ಇಲಾಖೆ ಬಹಳ ಉಪಯುಕ್ತವಾಗಿ ಕೆಲಸಮಾಡುತ್ತಿದೆ. ಅದರ ಕಾರ್ಯ ಕಲಾಪಗಳು ಇನ್ನೂ ಹೆಚ್ಚಾಗುವುದಕ್ಕೆ ಸರಿಯಾದ ಅವಕಾಶ ಕಲ್ಪಿಸಿಕೊಡಬೇಕಾದುದು ಅಗತ್ಯವೆಂದು ಮಾನ್ಯ ಸದಸ್ಯರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ಕಾರ್ಯಗಳು ಅಗತ್ಯವೆಂದು ಶ್ರೀಮಾನ್ ಲಂಗಾರೆಡ್ಡಿಯವರು ಅಪ್ಪಣೆ ಕೊಡಿಸಿದ್ದಾರೆ. ಇಲ್ಲದೆ ಹೋದ ಕ್ಷಾಮ

ವನ್ನು ಏತಕ್ಕೆ ಕರೆಯುತ್ತೀರಿ ಎಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾಲೂರಿನ ಕೆಲವು ಕಡೆಗಳಲ್ಲಿ ಮಳೆ ಇಲ್ಲ. ಬೆಳೆ ಆಗಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಒಂದು ವೇಳೆ ಅವಶ್ಯಕ ಕಂಡುಬಂದರೆ ಸರ್ಕಾರದವರು ಕ್ಷಾಮಪರಿಹಾರ ಕಾರ್ಯವನ್ನು ಮಾಡುವುದಕ್ಕೆ ಹಿಂಜರಿಯುವುದಿಲ್ಲವೆಂದು ಅರಿಕೆಮಾಡಿಕೊಳ್ಳುತ್ತೇನೆ.

ನನ್ನ ಮಿತ್ರರಾದ ಶ್ರೀಮಾನ್ ಮಾಸ್ಕರನ್‌ಹಾಸ್‌ರವರು Public Works ಇಲಾಖೆಯನ್ನು re-organise ಮಾಡತಕ್ಕದ್ದು ಬಹಳ ಅಗತ್ಯ. ಮಂತ್ರಿಗಳು ಏತಕ್ಕೋ ಸೌಮ್ಯವಾಗಿದ್ದಾರೆ ಅಂದರೆ unruffled ಎಂದು ಹೇಳಿದರು. ಅವರ ಸಲಹೆಯನ್ನು ನಾನು ಪರಿಶೀಲನೆ ಮಾಡುತ್ತಿದ್ದೇನೆ. ಒಂದು ವರುಷದಿಂದಲೂ ಕೂಡ ಅವರು ಕೆಲವು ಸಲಹೆಗಳನ್ನು ಹೇಳಿದ್ದಾರೆ. ಎಲ್ಲಿ ತೊಡಕಿದೆ ಎಲ್ಲಿ ನೋವು ಇದೆ ಎಂಬುದು ಆಡಳಿತ ನಡೆಸುವವರಿಗೆ ಗೊತ್ತಾಗುತ್ತದೆ ಎಂದು ಬಹಳ ವಿನಯ ಪೂರ್ವಕವಾಗಿ ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಈ ದೇಶದ ಹಣವನ್ನು ಪೋಲುಮಾಡಬಾರದು ಎಂದು ನನ್ನ ಮಿತ್ರರಿಗೆ ಎಷ್ಟು ಆಸಕ್ತಿ ಇದೆಯೋ ನನಗೂ ಅಷ್ಟೇ ಆಸಕ್ತಿ ಇದೆ. ಕೆಲವರು ಡಿವಿಜನ್‌ಗಳು ಜಾಸ್ತಿ ಇವೆ ಎಂದು ಹೇಳುತ್ತಾರೆ. Public Works ಇಲಾಖೆಯ ಕಾರ್ಯಕಲಾಪಗಳು ಬಹಳ ಹೆಚ್ಚಾಗಿವೆ. ಅವರು ಮಾಡಬೇಕಾದ ಕೆಲಸಕಾರ್ಯಗಳು ಬಹಳ ಜಾಸ್ತಿಯಾಗಿವೆ. ಅದಕ್ಕೆ ಅನುಸಾರವಾಗಿ ನಾವು ಸಿಬ್ಬಂದಿಯನ್ನೂ ಕೂಡ ಹೆಚ್ಚಾಗಿ ಮಾಡತಕ್ಕದ್ದು ಬಹಳ ಅಗತ್ಯ. ಹಿಂದೆ ಹೇಳಿದ ಹಾಗೆ ಮೈಸೂರು ಸಂಸ್ಥಾನದಲ್ಲಿ establishmentಗೆ ಏನು ಖರ್ಚು ಮಾಡುತ್ತಿದ್ದೆವೋ ಅದು ಕೇವಲ 8 ಅಥವಾ 8½ per cent ಎಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಬಾಕಿ ಕಡೆ 12 ರಿಂದ 15ರ ವರೆಗೂ ಇರುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬಾಕಿ ಕಡೆ ಇರುವುದಕ್ಕಿಂತ scales of pay ಇಲ್ಲಿ ಕಡಿಮೆ ತಾನೆ?

Sri B. HUTCHEGOWDA.—No advice need be given in regard to this department ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ್ದನ್ನೆಲ್ಲಾ ನಾವು ಸ್ವಾಗತಿಸುತ್ತೇವೆ. ಎಲ್ಲಿ ಸಾಧ್ಯವೋ ಅಲ್ಲಿ ತಮ್ಮ ಸಲಹೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri B. HUTCHEGOWDA.—We have gone into the matter deeply.

ಶ್ರೀ ಕಡಿದಾಳ್ ಮಂಜಪ್ಪ.—ಮೊನ್ನೆ ಅರಿಕೆ ಮಾಡಿಕೊಂಡಿದ್ದೇನೆ. ಎಸ್ಟಿಮೇಟುಗಳ ಕಮಿಟಿ ವರದಿಯನ್ನು ಸರಕಾರದವರು ಪರಿಶೀಲನೆಮಾಡುತ್ತಿದ್ದಾರೆ, ಸಾಧ್ಯವಾದ ಬಾಬುಗಳಲ್ಲಿ ತಮ್ಮ ಸಲಹೆಯನ್ನು ಕಾರ್ಯರೂಪಕ್ಕೆ ತರುವುದಕ್ಕ ಪ್ರಯತ್ನಮಾಡುತ್ತೇವೆ.

ಸಂಗೇನಹಳ್ಳಿ, ತುಪ್ಪದಹಳ್ಳಿ ಕೆರೆಗಳು ಒಡೆದು ಹೋದ ಸಂಬಂಧದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನೂ ಕೈಗೊಂಡಿಲ್ಲವೆಂದು ಕೆಲವರು ಆಕ್ಷೇಪಣೆ ಮಾಡಿದ್ದಾರೆ. ನಿಜ. ಇದುವರೆಗೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಯಾವ ಅಧಿಕಾರಿಯ ಮೇಲಾಗಲೀ disciplinary action ತೆಗೆದುಕೊಳ್ಳುವಾಗ ಕೆಲವು ಕ್ರಮಗಳನ್ನು ನಾವು ಅನುಸರಿಸಬೇಕಾಗುತ್ತದೆ. ಶ್ರೀಮಾನ್ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಲ್ಪಟ್ಟ ಸಮಿತಿಯವರು ಸರ್ಕಾರಕ್ಕೆ ವರದಿಯನ್ನು ಒಪ್ಪಿಸಲ್ಪಟ್ಟನಂತರ ಕೆರೆಗಳ ದುರಸ್ತಿಗೋಸ್ಕರ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಒಂದು ಕೆರೆಯ ದುರಸ್ತಿ ಕಾರ್ಯ ಈ ವರ್ಷದ ಜೂನ್ ತಿಂಗಳೊಳಗೆ ಮುಗಿಯಬಹುದು ಎಂದು ಸರ್ಕಾರದ ನಿರೀಕ್ಷೆಯಿದೆ. ಅಧಿಕಾರಿಗಳಮೇಲೆ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕೆಲವು ಕಾರಣಗಳಿವೆ. ಚೀಫ್ ಇಂಜನಿಯರು ಸಂಬಂಧಪಟ್ಟ ಅಧಿಕಾರಿಗಳ explanation ಬರಮಾಡಿಕೊಂಡಿದ್ದಾರೆ. ಆದರೆ ಕಾನೂನಿಗನುಸಾರವಾಗಿ explanation call for ಮಾಡಿಲ್ಲ. ಸರ್ಕಾರಕ್ಕೆ ಚೀಫ್ ಇಂಜನಿಯರ ವರದಿ ಬಂದನಂತರ ಈ ವಿಚಾರ ಗೊತ್ತಾಯಿತು. ಅದಕ್ಕೋಸ್ಕರ ಕಾನೂನು ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳ explanation call for ಮಾಡಿತು.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಕೆಲವು ಅಧಿಕಾರಿಗಳಿಗೆ promotion ಕೊಟ್ಟಿರುವುದು ನಿಜವೇ?

ಶ್ರೀ ಕಡಿದಾಳ್ ಮಂಜಪ್ಪ.—ಅಂತ್ಯತೀರ್ಮಾನವಾಗಿ ತಪ್ಪಿತಸ್ಥರು ಎಂದು ಹೇಳುವವರಿಗೆ ಆ ಅಧಿಕಾರಿಗಳು innocent ಎಂದು ಭಾವಿಸಬೇಕು. ಆದ್ದರಿಂದ promotion ಕೆಲವರಿಗೆ ಕೊಟ್ಟಿದ್ದೇವೆ. ಒಂದು ವೇಳೆ ಸರ್ಕಾರದ ಅಂತಿಮ ತೀರ್ಮಾನ ಪ್ರಕಾರ ಅಧಿಕಾರಿಗಳು ತಪ್ಪಿತಸ್ಥರಾದರೆ ಆ ತಪ್ಪಿಗೆ ತಕ್ಕ ಶಿಕ್ಷೆಯನ್ನು ಅನುಭವಿಸಲೇ ಬೇಕು. ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಸರಬರಾಯಿಗೆ ಸರ್ಕಾರದವರು ಸಾಕಾದಷ್ಟು ವ್ಯವಸ್ಥೆಯನ್ನು ಮಾಡಲಿಲ್ಲವೆಂದು ಕೆಲವರು ಅಪ್ಪಣೆ ಕೊಟ್ಟಿದ್ದಾರೆ. ಈಗಾಗಲೇ ಸಂಸ್ಥಾನದ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಸರಕಾರದವರು ತೆಗೆಸಿದ್ದಾರೆ. ಪಟ್ಟಣದವರಿಗೆ ಯಾವ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದಾರೋ ಅದೇ ಸೌಕರ್ಯವನ್ನು ಹಳ್ಳಿಯ ಜನರಿಗೆ ಕಲ್ಪಿಸಿಕೊಡತಕ್ಕದ್ದು ಸರಕಾರದ ಪವಿತ್ರ ಕರ್ತವ್ಯವೆಂದು ನಾನು ಈ ಸಮಯದಲ್ಲಿ ಒಪ್ಪಿಕೊಳ್ಳುತ್ತೇನೆ. ಅದಕ್ಕೋಸ್ಕರ ಒಂದು ಸರ್ವೆ ಮಾಡುವುದಕ್ಕೆ ಏರ್ಪಾಡು ಮಾಡಿಬಿಟ್ಟು ಯಾವ ಯಾವ ಹಳ್ಳಿಗೆ ಇದುವರೆಗೆ ಕುಡಿಯುವ ನೀರಿನ ಬಾವಿಯನ್ನು ಕೊಟ್ಟಿಲ್ಲವೋ ಆ ಹಳ್ಳಿಗಳಿಗೆಲ್ಲಾ ಎರಡು ವರ್ಷಗಳೊಳಗೆ ಕುಡಿಯುವ ನೀರಿನ ಬಾವಿಗಳನ್ನು ಕೊಡುವುದಕ್ಕೆ ಸರಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಂದು ಬಹಳ ಸಂತೋಷದಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀಮಾನ್ ದುಗ್ಗಪ್ಪನವರು ಮಾತನಾಡುವಾಗ ಈ ಅಧಿಕಾರಿಗಳ ಬಡ್ತಿ ವಿಚಾರದಲ್ಲಿ ಸರಕಾರದವರು ಒಂದು ಸ್ಪಷ್ಟವಾದ ನೀತಿಯನ್ನು ಅನುಸರಿಸಿಲ್ಲ, ಮನಸ್ಸಿಗೆ ಬೇಕಾದ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ಹೇಳಿದರು. ಈ ಮಂತ್ರಿ ಮಂಡಲ ಅಧಿಕಾರಕ್ಕೆ ಬಂದಲಾಗಾಯಿತು promotion ವಿಚಾರದಲ್ಲಿ ಸ್ಪಷ್ಟ ನೀತಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಆ ನೀತಿಯನ್ನು ಅನುಸರಿಸುತ್ತಿದ್ದಾರೆ. Promotion ಕೊಡುವಾಗ ಜಾತಿ ಅಥವಾ ಕೋಮುವಾರು ಭಾವನೆಯಿಂದ ಸರ್ಕಾರದವರು ತೀರ್ಮಾನ ಮಾಡುವುದಿಲ್ಲವೆಂದು ಪುನಃ ನಾನು ಒತ್ತಿ ಹೇಳಬೇಕಾಗಿದೆ. Promotion ಕೊಡುವಾಗ seniority ಮತ್ತು ದಕ್ಷತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು promotion ಕೊಡಲಾಗುತ್ತಿದೆ. Recruit ಮಾಡುವಾಗ ನಿಮ್ನವರ್ಗದವರಿಗೆ ಮತ್ತು ಹಿಂದುಳಿದ ಇತರ ಪಂಗಡದವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡುವ ಉದ್ದೇಶದಿಂದ ಕೆಲವು ಸ್ಥಾನ

(ಶ್ರೀ ಕಡಿದಾಳ್ ಮಂಜಪ್ಪ.)

ಗಳನ್ನು ಅವರಿಗೋಸ್ಕರ ಮೀಸಲಾಗಿ ಇಟ್ಟಿದ್ದೇವೆ. ಇದು ಸರ್ಕಾರದ ಸ್ಪಷ್ಟವಾದ ನೀತಿ. ಈ ನೀತಿಯಲ್ಲಿ ಬದಲಾವಣೆಯಿಲ್ಲವೆಂದು ಸ್ಪಷ್ಟ ಪಡಿಸಬೇಕಾಗುತ್ತದೆ. Ministers are wandering and opening mutton stalls ಎಂದು ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ಹೇಳಿದರು.

ಶ್ರೀ ಮಹಮ್ಮದ್ ಇಮಾಂ.—Wandering ಎಂದು ಹೇಳಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಈ ಸಭೆಯಲ್ಲಿ 5-6 ಜನ ಮಾನ್ಯ ಸದಸ್ಯರುಗಳನ್ನು ಬಿಟ್ಟು ಉಳಿದವರೆಲ್ಲರೂ ಕೂಡ ಅವರವರ ಚುನಾವಣೆ ಕ್ಷೇತ್ರದಲ್ಲಿ ನಾನು ಪ್ರವಾಸ ಮಾಡಲಿಲ್ಲವೆಂದು ಆಕ್ಷೇಪಣೆ ಮಾಡುತ್ತಾರೆ. ಅನೇಕರು ತಮ್ಮ ಚುನಾವಣಾ ಕ್ಷೇತ್ರಕ್ಕೆ ಬರುವುದಕ್ಕೆ ಇಷ್ಟಪಡುವುದಿಲ್ಲ, ಅಲಕ್ಷ್ಯದಿಂದ ವರ್ತಿಸುತ್ತಿದ್ದಾರೆ ಎಂದು serious ಆಗಿ ನನ್ನ ಹತ್ತಿರ ಮಾತನಾಡಿದ್ದಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಚುನಾವಣಾ ಕ್ಷೇತ್ರಕ್ಕೆ ಬರಬೇಕು ಎಂದು ಮನವಿಮಾಡಿಕೊಂಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಕೆಲವು ಕಡೆ 5-6 ಸಲ ಹೋಗುತ್ತೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಕಾರ್ಯಾರ್ಥವಾಗಿ ಹೋಗಿರಬಹುದು. ದೊಡ್ಡ ದೊಡ್ಡ project ಗಳು ಇರುವ ಕಡೆ ಹೋಗಲೇ ಬೇಕು. ಲಕ್ಕವಳ್ಳಿ, ತುಂಗಾ ಅಣೆಕಟ್ಟಿನ ಪರಿಶೀಲನೆಗೆ 5-6 ಶಾರಿ ಹೋಗುತ್ತೇನೆ. ನಮ್ಮ ಜಿಲ್ಲೆಯೆಂದು ಹೋಗುವುದಿಲ್ಲ. ಅಲ್ಲಿ 20 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಹಾಗೆ ಖರ್ಚು ಮಾಡುವಾಗ ಸರ್ಕಾರದ ನಿಗಾ ಹೆಚ್ಚಾಗಿಯೇ ಬೇಕು, ಮಂತ್ರಿಗಳು ತಮಾಷೆಗೋಸ್ಕರ ಪ್ರವಾಸ ಮಾಡುವುದಿಲ್ಲ. ಪ್ರವಾಸ ಮಾಡಿದಾಗಲೆಲ್ಲ ಸರ್ಕಾರದ ಕೆಲಸವನ್ನೇ ಮಾಡುತ್ತಾರೆ, ಇಡೀ ಜನತೆಯ ಆಗುಹೋಗುಗಳನ್ನು ಮಂತ್ರಿಗಳ ಕೈಯಲ್ಲಿ ಕೊಟ್ಟಿರುವಾಗ ಮಂತ್ರಿಗಳು 100 ಮೈಲಿ ಪ್ರವಾಸ ಹೋದರೆ ಅದಕ್ಕೆ ಏತಕ್ಕೋಸ್ಕರ ಪ್ರಾಮುಖ್ಯತೆಯನ್ನು ಕೊಡಬೇಕೋ ಗೊತ್ತಿಲ್ಲ.

ಶ್ರೀ ಮಹಮ್ಮದ್ ಇಮಾಂ.—Election propagandaಕ್ಕೆ ಹೋಗುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—Election propagandaಕ್ಕೆ ಪ್ರವಾಸ ಮಾಡಿರುವುದು ತಮ್ಮ ಅನುಭವದಲ್ಲಿ ಇದೆ, ನನ್ನ ಅನುಭವದಲ್ಲಿ ಇಲ್ಲ. ಪ್ರವಾಸ ಸುಖಮಯವಾಗಿರುವುದಿಲ್ಲ. ನನಗಂತೂ ಪ್ರವಾಸ ತಪ್ಪಿದರೂ ಸಾಕು. ಮಾನ್ಯ ಸದಸ್ಯರು ನನ್ನನ್ನು ಪ್ರವಾಸ ಮಾಡದೆ ಇರುವುದಕ್ಕೆ ಆಸ್ಪದ ಕೊಡುವುದುಚಿತ.

ಶ್ರೀ ಮಹಮ್ಮದ್ ಇಮಾಂ.—ಜಗಳೂರು ತಾಲ್ಲೂಕಿಗೆ ಒಬ್ಬ ಮಂತ್ರಿಗಳೂ ಬಂದಿಲ್ಲ, Chief Minister ಬಂದೇ ಇಲ್ಲ.

Dr. R. NAGAN GOWDA (Minister for Agriculture).—Mr. Speaker, Sir, I will first take some of the criticisms that have been offered on the Department of Electricity. Sri Madhavachar, while talking on that, said that Honnemaradu Project is very necessary. I am glad to inform him that there is all possibility of our getting it very soon. At the same time he voiced the difficulties that the people whose lands are likely to be submerged would feel. Now, I want to assure him that we will take every step that is necessary to see that these people are properly rehabilitated. He suggested that we should use some of the land under Bhadra Channel for garden purposes. This point also will be borne in mind. Then the other important thing that came in for considerable amount of criticism and which was voiced by Sri Muniswamy was this. This, he says, has taken a long time; it is delayed very considerably. That is true. The delay is for this reason. When we start converting 25 cycles to 50 cycles of any one line, until all the consumers get ready and unless they are ready with their own motors, it will be difficult for us to undertake the work. That is why it takes a long time. I can only assure that we are doing our best in this matter and we are going to have this conversion made as quickly as possible.

Then there was another criticism regarding the supply of electricity to the four taluks in Tumkur District and this was mentioned by Sri C. T. Hanumanthaiya. Those four taluks are in a very difficult condition I agree. But this conversion of 25 cycles to 50 cycles will enable us to give current to those taluks. I would like to inform him that we expect to do this work within about six months.

There was another matter. Sri Nagarajamurthy was saying that our engineers are in great demand all over India. Anyway that is a thing which we have to be proud of. Our engineers are very good in another line, that is, in the sugar engineering. Quite a large percentage of engineers have been taken from Mysore for work in the Sugar Factories all over India. The training and the facilities that are given here are so good that these people have gone there. If some of our engineers are attempting to go somewhere else, we should only feel complimented that our engineers are so good!

There was very severe criticism from Sri Mascarenhas. He said that he was beginning to really feel that there was something wrong with that department.

Though I feel, I will not be able to go through the voluminous figures that are required to show that things are not so bad, there is no reason for him to be afraid of. But I mention some important facts ; comparing 47-48 to 55-56,—I will give in round figures—the capital expenditure then was 40 lakhs; in 55-56 we are budgeting for 3 crores and 72 lakhs which is more than 9 times what we spent in that year. But, then Sir, our maintenance expenditure has gone up from 33 lakhs to hundred lakhs, the increase is only 3 times. This maintenance operation expenditure includes raw materials, tools and plants and also maintenance of staff and men. The increase is not proportionate to the increase in our capital outlay, the increase in the number of new lines that are opened and the maintenance that is needed. There is another fact which I should like to point out. In 1947-48 we contributed to the depreciation fund 20 lakhs of rupees. This year we are contributing, as was shown by Sri Huchmasthy Gowda, 77 lakhs of rupees for that. The contribution to the depreciation fund is therefore almost four times of what we did in 1947-48. Similarly, I would say that the work in the department has increased considerably all along the line. I feel that it is much more economical than it is in other parts of India. But we are all the while on the look out to see in what other lines it could be economised. As I said just a few minutes ago, we are going to take the Honnemaradu and then other works. One of the Hon'ble Members was mentioning about the second line from Bhadravati to Bangalore. I am glad to tell him, Sir, that this will be undertaken this year and so the supply of electricity to Bangalore will be much more satisfactory hereafter than it is now. Of course, the work will take a year or more, probably two years, because the work of that magnitude cannot be done in a very short time.

Sir, I now pass on to other subjects on which the Hon'ble Members offered criticisms. One of the lesser important but still a matter of great importance to the State is about beggar relief. What I can say is this : that we have recently received a report of the Special Committee that was appointed to go into the whole question. It was Sri Madhavachar that has referred to this. The proposals made by the Committee are being examined. He suggested that when the beggars leave the beggars' home, they ought to be in a position to depend on themselves and we are now giving some training in some lines.

Another department that came up for considerable amount of attention in the hands of the members is the Department of Co-operation. Mr. Nagappa Setty was saying that there is a fall in the price of agricultural produce. Now I can only mention that the Department of Co-operation is trying its best to reduce the hardship that the cultivator is bound to feel on account of the fall of the prices. We are giving short term credit at a very low rate of interest. And then we are also organising Co-operative Marketing Societies throughout the State. Sri Kari Gowda was saying that the Housing Scheme was meant only for the cities and not for the villages. We have got Housing Co-operative Societies in each of the Taluk Headquarters and we expect to make use of the low income Housing Scheme. Through these Taluk House Building Co-operative Societies, we will try and see that the villager is also helped to build houses. It is a novel experiment that is being done ; if I may refer to Bellary, my own district, we have a rural Housing Scheme on the banks of the river Hagari where a few houses have been built for villagers through the Co-operative Societies. I think, we should as far as possible do this. I agree with Sri Karigowda in that respect.

Then, Sir, *re*: Multipurpose Societies. Sri. Singari Gowda was saying "why have a large number of societies—Land Mortgage Societies, Short Term Credit Societies, the Multipurpose Societies, Marketing Societies, Housing Societies and all that." At one time we tried a number of activities through Multipurpose Societies. But it is the experience in many States that they did not work very well. That is why I think that it is necessary that we should have societies for different purposes. He also said

(DR. R. NAGAN GOWDA.)

that our Multipurpose Societies have not been audited for some years. The situation is not so bad. Now we have employed a large number of auditors and since October 1954, I am in a position to state that 80 per cent of the societies have been audited.

Now I will move on to some of the criticisms that have been levelled on the Agriculture Department. The most important was the remark made by the Leader of the Opposition that the expenditure in the Department of Agriculture has gone up very high, from a few lakhs in 1947 to almost half a crore at present. Well, the expenditure has gone up; but there are many new activities that we have taken up now. One of the Hon'ble Members was mentioning about compost and supply of insecticides. We have now taken up the compost scheme. We have an Agricultural College where we had only an Agricultural Schools in 1947-48 and then we have these tractors and bulldozers service also. We have had some difficulties with that. There is just another thing that also must be taken into consideration and that is this. The addition of Bellary has brought certain amount of expenditure in agricultural line. Here there are two very good experimental farms. Hagari farm is a very very old one; they have done some work and they have been responsible for some new varieties of Jawar and black cotton. The experimental farm at Siruguppa has done very good work on irrigation of black cotton soil and now we are in a position to give that information to the Hyderabad State also where they did not have these experiments and who are using the results of our experiments. That we have been carrying on at Siruguppa. Now in the valley of Tungabhadra we will have 3 lakhs of acres on our side. With the coming of High Level Canal, probably we will have quite a bit more; and all these areas would require the results of experiments that are being done here. So the expenditure in the Agriculture Department has not been all just for the payment of salaries.

Sri J. MOHAMED IMAM.—You forgot to mention about the chicken.

Dr. R. NAGAN GOWDA.—That comes under Animal Husbandry and we are trying to distribute about 15,000 eggs this winter; during next year, we will be able to double that number. I am glad you have been able to appreciate this work.

6 P.M.

Now, Sir, there is only one other subject on which I would like to deal now. About the Forest Department Sri. T. C. Basappa was mentioning the advances that were given for supply and collection of fuel and charcoal in the Bhadravathi area. Some of these advances that have been given, we are now examining and taking steps to make collection. There were some remarks made by our friend Sri Huchmasthy Gowda about the expenditure that we are incurring on the maintenance of the plantations in the forests. Of course in some areas the income is not commensurate with the expenditure that is incurred, but the most important thing here is this, that we have got large areas of forests which have been denuded of trees during the war time and now it is necessary for us to afforest these areas in the interests of better atmosphere and climate and we are doing our best. We have got a number of experiments going on to afforest these areas as economically as possible.

Sri H. SIDDAVEERAPPA.—Mr. Speaker, Sir, before I refer to the several points raised by the Hon'ble Members during the general discussion on the Budget, I would like to refer to a point which has not been referred to this time; that is about the food problem. For the first time, after so many years we all notice there is no reference either by way of criticism or otherwise to this problem which plagued us for so many years. I hope the Leader of the Opposition will congratulate the Government at least for this, if not for anything else that we have been able to. . . .

Sri J. MOHAMED IMAM.—We must congratulate ourselves because on our suggestions, controls are lifted and there is plenty of food.

(*Laughter*).

Sri H. SIDDAVEERAPPA.—We are all very happy that the food problem has been solved to the utmost satisfaction of the country though of course the problems are now otherwise. I am not referring to them now since the time at my disposal is very limited. It would be rather very difficult for me to refer to every point raised by the Hon'ble Members and answer in detail. If I omit any point, I would like to take an opportunity when it arises to meet some of the points that I am likely to omit now due to want of time.

First of all, I would like to refer to the Home Department, firstly because the Hon'ble the Leader of the Opposition mentioned that the expenditure on the Police in the State is mounting. He compared the figures from 46-47 and pointed out that the mounting expenditure on the Police would have to be curtailed. Factually, he is not incorrect. In 1946-47 we incurred an expenditure of Rs. 35,43,632 and gradually it went on mounting up. Ultimately in the year 1953-54 accounts are at Rs. 1,12,56,400. In 1954-55 we are likely to spend Rs. 1,23,33,000 and for 1955-56 figures are in the hands of the Hon'ble Members. I would like to explain the cause or the causes for the seemingly abnormal rise in the expenditure. I owe an explanation to the House. It is very significant to know so far as the actual number is concerned, it has not appreciably increased. I am giving the figures in 1947 and comparing them with the figures in 1954. There was one I.G.P. in 1947 and the same number continues. There were 3 D.I.Gs. in 1947 and the same number continues.

Sri B. HUTCHE GOWDA.—Please take the year 1945-46.

Sri H. SIDDAVEERAPPA.—How in 1946 we were responsible for a lot of expenditure—I will come to that. In 1947 there were 14 D.S.Ps. To-day we have 19; in 1947, 21 A.S.Ps, in 1954 27. In 1947, 145 P.Is. In 1954 150. In 1947, 353 S.Is. To-day 426. In 1947, 62 Sergeants and Subedars; to-day 84. In 1947 200 Head Constables: to-day 216. In 1947, 55 Jamedars; to-day 49. In 1947 1,116 Daffedars and Naiks; to-day 1291. In 1947 9,626 Police Constables; to-day 10,578. The total number in 1947 was 11,599; in 1954 it is in the order of 12,844. The rise in 1954 as the House is aware of, is for the inclusion of Bellary. It will be relevant to see why the expenditure has increased during this period although the figure is more or less the same. That deserves to be explained. This is how the expenditure has increased. In 1942 the increase was only Rs. one lakh; in 1946 it was Rs. 8½ lakhs. The Hon'ble House is aware as to why it was so; because of the general revision in the scales of pay of all the officers. As to how much it cost the State, I need not state. I will only refer to my Department. In 1946 the re-organization of the Bangalore City Police Force cost Rs. 1½ lakhs more. Between 1946 and 1951 the dearness allowance amounts to Rs. 25 lakhs. In 1947 we incurred another additional expenditure of Rs. 15 lakhs mainly due to the retrocession of the Civil Station and the Railway Police. In 1947 general revision of scales of pay of the subordinate staff accounts for an additional expenditure of Rs. 25 lakhs.

In 1951 prohibition staff—Rs. 3½ lakhs. Palace Guards—Rs. 2 lakhs. In 1953 merger of Bellary has cost us Rs. 6 lakhs more. Therefore it will be seen that I have accounted for nearly Rs. 97 lakhs additional expenditure for reasons beyond the control of the Government and they are all commitments which we are bound to carry out.

Another point which I would like to explain is, I am very happy to say that although it has been my duty to say that the expenditure is very heavy, nobody criticised the administration of the Police Department except the Hon'ble Member from the Reserve Constituency of Hiriyur Taluk who said that the prohibition work was quite unsatisfactory and that the Police are entirely responsible for it. As we are all aware of, prohibition was introduced in four districts on 1-7-48 and subsequently it has gone on being extended from place to place. You will be able to find during this period from 1-7-48 up to the current period we have registered 62,034 cases and the fines

(SRI H. SIDDAVEERAPPA.)

